
# ಗುರುಶಿಷ್ಯರ ತತ್ವಪದಗಳು



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨.

# ಗುರು ಶಿಷ್ಯರ ತತ್ವಪದಗಳು

ಸಂ. ಡಾ॥ ವಿಜಯಶ್ರೀ ಸಬರದ
ಸಂಪಾದಕರು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

"GURU SHISHYARA TATVA PADAGALU" Edited by : Dr. Vijayshree Sabarad, Inst. of Kannada Studies, Gulbarga University, Gulbarga. Published by Karnataka Janapada & Yakshagana Academy, Bangalore - 560 002

Pages : XVI + 56
First Edition : 1997
Price :·Rs. 25/-
© Editor

ಮುದ್ರಕರು :
ರಶ್ಮಿ ಮುದ್ರಣ
ಬೆಂಗಳೂರು - 27
ದೂರವಾಣಿ : 2243550

# ಪ್ರಧಾನ ಸಂಪಾದಕರ ಮಾತು

ಕನ್ನಡ ಸಾಹಿತ್ಯ ತನ್ನ ಸೃಜನಶೀಲ ಶಕ್ತಿಯಿಂದ ಹಾಗೂ ಕಲ್ಪನಾಶೀಲ ಆಯಾಮಗಳಿಂದ ಸಮೃದ್ಧವಾಗಿರುವುದರ ಜೊತೆಗೆ ಈ ಲೋಕ ಮತ್ತು ಆ ಲೋಕಗಳ ಅನುಭವವನ್ನು ಹಾಗೂ ದೈವ ಪರವಾದ ನಂಬಿಕೆಗಳನ್ನು ಒಳಗೊಂಡ ಆಧ್ಯಾತ್ಮಿಕ ಸಂಗಂತಿಗಳನ್ನು ಜೀವದ್ರವ್ಯವಾಗಿಸಿಕೊಂಡ ವಿಶಿಷ್ಟ ಮೌಲಿಕತೆಯನ್ನು ಕೂಡ ಪಡೆದಿದೆ. ಕನ್ನಡ ಜನಪದ ಸಾಹಿತ್ಯ ಕೂಡ ಇದಕ್ಕೆ ಹೊರತಾಗಿಲ್ಲ. ದೈನಂದಿನ ಜೀವನಾನುಭವಗಳನ್ನು ಅತ್ಯಂತ ಹೃದಯಂಗಮವಾಗಿ ತಮ್ಮದೇ ಆದ ವಿಶಿಷ್ಟ ಅಭಿವ್ಯಕ್ತಿ ಕ್ರಮದಲ್ಲಿ ಸಾದರಪಡಿಸುವ ಜನಪದ ಕವಿಗಳು ಭಕ್ತಿ, ವೈರಾಗ್ಯ, ಅನುಭವ ಹಾಗೂ ಅನುಭಾವಗಳನ್ನು ತುಂಬಾ ಸಮರ್ಥವಾಗಿ ಮತ್ತು ಸಹೃದಯರ ಮನದಲ್ಲಿ ನೆಟ್ಟು ನಿಲ್ಲುವಂತೆ ಸಂಗೀತ ಮತ್ತು ಭಾಷೆಗಳ ಸಮ್ಮಿಳನದೊಡನೆ ಪ್ರಕಟಿಸಿದ್ದಾರೆ. ಹೀಗಾಗಿ ಕನ್ನಡದಲ್ಲಿ ತತ್ವಪದ ಸಾಹಿತ್ಯಕ್ಕೆ ಉತ್ತರ ಕರ್ನಾಟಕದ ಜಿಲ್ಲೆಗಳು ತೌರುಮನೆಯಾಗಿವೆ. ಅನಕ್ಷರಕುಕ್ಷಿಗಳಾದ ಈ ಪ್ರದೇಶದ ಹಳ್ಳಿಯ ಜನ ಕುರಿತು ಓದಿದ ಕಾವ್ಯ ಪ್ರಯೋಗ ಪರಿಣತ ಮತಿಗಳಿಗಿಂತ ತುಂಬಾ ಸಶಕ್ತವಾದ ಹಾಗೂ ಮನೋಹರವಾದ ರೀತಿಯಲ್ಲಿ ತಮ್ಮ ಜೀವನದ ಭಾಗವೇ ಆದ ಅನುಭಾವವನ್ನು ಸಂವಹನಿಸಿದ್ದಾರೆ. ಆ ಪ್ರದೇಶದಲ್ಲಿ ಈ ಬಗೆಯ ಸಾಹಿತ್ಯ ಅತ್ಯಂತ ಸಮೃದ್ಧವಾಗಿದ್ದು ಸಂಗ್ರಹಕಾರರ, ಸಂಪಾದಕರ ಹಾಗೂ ಸಂಸ್ಕೃತಿ ಪ್ರಿಯರ ಸ್ಪರ್ಶಕ್ಕಾಗಿ ಕಾದು ನಿಂತಿದೆ. ಈ ತತ್ವಪದಕಾರರಲ್ಲಿ ಅತ್ಯಂತ ಕೆಳಸ್ತರದ ದಲಿತ ವರ್ಗದ ಅನುಭಾವಿ ಕವಿಗಳು ಇರುವುದು ಗಮನಾರ್ಹ. ಇವರು ವೇದಿಕೆಯ ಮೇಲ ನಿಂತು ಹಾಡುವಾಗ, ಅವರ ಹಾಡುಗಳಲ್ಲಿ ಅತ್ಯಂತ ಸೂಕ್ಷ್ಮವೂ, ಗಹನವೂ ಆದ ತತ್ವಗಳನ್ನು ಸಹಜ ಸುಂದರವಾಗಿ, ಸರಾಗವಾಗಿ ವೈವಿಧ್ಯಮಯ ನಾದದೊಡನೆ ಹೊಮ್ಮಿಸುವಾಗ ಆ ಪದಗಳ ಭಾಷೆಯ ಸಿರಿವಂತಿಕೆಯನ್ನು, ಧ್ವನಿಪೂರ್ಣತೆಯನ್ನು ಗಮನಿಸಿದಾಗ ಇವರು ಎಂತಹ ವಿದ್ವಾಂಸರು ಎನ್ನಿಸುತ್ತದೆ. ಆದರೆ ಅವರು ವೇದಿಕೆಯಿಂದ ಕೆಳಗಿಳಿದು ಬಂದ ಕೂಡಲೆ ಸಾಮಾನ್ಯರಲ್ಲಿ ಸಾಮಾನ್ಯರಾಗಿ ತಮ್ಮ ಅನರಕ್ಷತೆಯನ್ನು ಪ್ರಕಟಪಡಿಸುತ್ತಾರೆ. ಇಂತಹ ಒಂದು ಕಾವ್ಯ ಪವಾಡ ಈ ತತ್ವಪದಕಾರರದ್ದು. ಇತ್ತೀಚೆಗೆ ಇಂತಹ ಅಮೂಲ್ಯವಾದ ತತ್ವಪದಗಳನ್ನು ಸಂಗ್ರಹಿಸಿ ಪ್ರಕಟಿಸುವ ಸತ್ಪ್ರಯತ್ನಗಳು ನಡೆಯುತ್ತಿರುವುದು ಸ್ವಾಗತಾರ್ಹ. ಡಾ: ಬಸವರಾಜ ಸಬರದ ಅವರು ಈಗಾಗಲೇ ಗುಲ್ಬರ್ಗಾ ಜಿಲ್ಲೆಯ ಅನುಭಾವಿ ಕವಿಗಳು ಮತ್ತು ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು ಎಂಬ ಕೃತಿಗಳನ್ನು ಪ್ರಕಟಿಸಿ ನಮ್ಮ ಸಾಹಿತ್ಯಕ್ಕೆ ಒಂದು ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಈ ನಿಟ್ಟಿನಲ್ಲಿ ಡಾ: ವಿಜಯ ಶ್ರೀ ಸಬರದ ಅವರು ಸಂಪಾದಿಸಿರುವ 'ಗುರುಶಿಷ್ಯರ ತತ್ವಪದಗಳು' ಎಂಬ ಈ ಕೃತಿ ಜನಪದ ಅನುಭಾವ ಸಾಹಿತ್ಯಕ್ಕೆ ಒಂದು ಮೌಲಿಕ ಸೇರ್ಪಡೆಯಾಗಿದೆ.

ತತ್ವಪದ ಸಾಹಿತ್ಯವನ್ನು ಅನುಭಾವ ಸಾಹಿತ್ಯ, ಕೈವಲ್ಯ ಸಾಹಿತ್ಯ ಎಂದೆಲ್ಲಾ ಗುರುತಿಸಲಾಗಿದೆ. ಬದುಕಿನ ಹಲವು ಮುಖಗಳ ಆಳದಲ್ಲಿ ಹುದುಗಿರುವ ದೇವರನ್ನು, ಜಗತ್ತನ್ನು ಕುರಿತ ಅಪೂರ್ವ ಸಂವೇದನೆಗಳ ಆಧ್ಯಾತ್ಮದ ಗಾಂಭೀರ್ಯವನ್ನು ಸಾಕ್ಷಾತ್ಕರಿಸಿಕೊಂಡು ಇಲ್ಲಿ ಮೈದಳೆದಿವೆ. ಪ್ರತಿಯೊಂದು ಅನುಭವದ ತಾತ್ಕಾಲಿಕ

ತಳಹದಿಯಲ್ಲಿ ಶಾಶ್ವತವಾದ ಮತ್ತು ಸಾರ್ವಕಾಲಿಕವಾದ ಒಂದು ಜೀವತತ್ವ ಅಡಕಗೊಂಡಿದೆ. ಸಾಮಾನ್ಯರಿಗೆ ಮತಿಗೋಚರವಾಗದಿರುವ ಈ ತತ್ವ ನಮ್ಮ ತತ್ವಪದಕಾರರಿಗೆ, ಅವರ ವಿಶಿಷ್ಟ ಜೀವನ ದೃಷ್ಟಿಯ ಮತ್ತು ದೈವೀಪರವಾದ ಭಾವನೆಯ ಕಾರಣದಿಂದ ಅಂಗೈನೆಲ್ಲಿಯಾಗಿದೆ. ಈ ತತ್ವಪದಗಳಲ್ಲಿ ಅಭ್ಯಾಸದಿಂದ ಮತ್ತು ಅನುಶೀಲನದಿಂದ ಬಂದ ಅನುಭವಕ್ಕಿಂತ ತಮ್ಮ ದಿನನಿತ್ಯದ ಬಾಳು ಬದುಕಿನ ಆಳದ ಸಂವೇದನೆಗಳನ್ನು ಪಾಡುಗಳನ್ನು ಹಾಡುಗಳನ್ನಾಗಿ ಕಟ್ಟಿ ಇಲ್ಲಿ ನಿವೇದಿಸಿಕೊಂಡಿದ್ದಾರೆ. ಈ ಸಂಗ್ರಹದಲ್ಲಿ ನಾಲ್ಕು ಜನ ದಲಿತ ತತ್ವಪದಕಾರರ ತತ್ವಪದಗಳು ಸೇರ್ಪಡೆಗೊಂಡಿವೆ. ಈ ಜಿಲ್ಲೆಯಲ್ಲಿ ತಾವು ಪದಕಾರರೆಂದು ಗುರುತಿಸಲಾಗಿರುವ ಇಪ್ಪತ್ತೂರು ಜನರಲ್ಲಿ ಈ ನಾಲ್ವರು ಗಮನಾರ್ಹರಾಗಿದ್ದಾರೆ. ತಿಪ್ಪಣ್ಣ ತಾತ, ಹೊಸೂರು ತಿಪ್ಪಣ್ಣ, ಕಲ್ಮಲಾ ತಾಯಣ್ಣ ಮತ್ತು ಯರೆ ಮಾರೆಪ್ಪ ಇವರೇ ಈ ತತ್ವಪದಕಾರರು. ಡಾ: ವಿಜಯಶ್ರೀಯವರು ಈ ನಾಲ್ಕು ಜನ ತತ್ವಪದಕಾರರ ಸಂಕ್ಷಿಪ್ತ ಪರಿಚಯವನ್ನು ಮತ್ತು ಅವರ ಪದಗಳ ಅನನ್ಯ ವಿಶಿಷ್ಟತೆಯನ್ನು ಇಲ್ಲಿ ದಾಖಲಿಸಿದ್ದಾರೆ. ದೈವಸ್ತುತಿಯನ್ನೇ ಈ ತತ್ವಪದಗಳು ಗುರಿಯಾಗಿ ಇಟ್ಟುಕೊಂಡಿದ್ದರೂ ಅದರ ಒಡಲಲ್ಲಿ ಜೀವನದ ಬಗೆಗಿನ ಅಪೂರ್ವವಾದ ತತ್ವಗಳನ್ನು ಪಡೆಮೂಡಿಸಿದ್ದಾರೆ. ಭಾವ ನಿರ್ಭರತೆ, ವೈವಿಧ್ಯಮಯ ಅನುಭವಗಳ ಅಭಿವ್ಯಕ್ತಿ, ದೈವದ ಬಗೆಗಿನ ಅಚಲ ನಂಬಿಕೆ, ಸಾಮಾನ್ಯವೆಂದು ಕಂಡುಬರುವ ಜೀವನದ ಸಂಗತಿಗಳ ಅಂತಃ ದ್ರವ್ಯವಾಗಿ ಹರಿಯುತ್ತಿರುವ ತಾತ್ವಿಕ ಅಂಶವನ್ನು ತುಂಬಾ ಸರಳವೂ, ಸಹಜವೂ ಆದ ರೀತಿಯಲ್ಲಿ ಸುಪರಿಚಿತ ಉಪಮೆಗಳ ಮತ್ತು ದೃಷ್ಟಾಂತಗಳ ಮೂಲಕವಾಗಿ ಕಟ್ಟಿಕೊಡುವ ನೈಪುಣ್ಯ ಇಲ್ಲಿ ಸುಪ್ರಕಟಗೊಂಡಿದೆ. ಇವುಗಳ ಸಾಹಿತ್ಯಕ ಹಾಗೂ ತಾತ್ವಿಕ ಅಧ್ಯಯನ ಓದುಗರಿಗೆ ಅನನ್ಯವಾದ ಅನುಭವ ಪ್ರಪಂಚವೊಂದನ್ನು ಕಲ್ಪಿಸಿಕೊಡುತ್ತದೆ. ಇಂತಹ ಅಪೂರ್ವ ತತ್ವಪದಗಳನ್ನು ಸಂಪಾದಿಸಿಕೊಟ್ಟ ಡಾ : ವಿಜಯಶ್ರೀ ಸಬರದ ಅವರು ಅಭಿನಂದನಾರ್ಹರಾಗಿದ್ದಾರೆ. ಸಾಹಿತ್ಯ, ವಿಮರ್ಶೆ ಮತ್ತು ಸಂಶೋಧನೆಗಳಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡಿರುವ ಡಾ : ವಿಜಯಶ್ರೀ ಅವರು ತುಂಬಾ ಶ್ರಮವಹಿಸಿ ಈ ಪದಗಳನ್ನು ಕಲೆಹಾಕಿರುವುದು ಮಾತ್ರವಲ್ಲದೇ ವಿದ್ವತ್ಪೂರ್ಣವಾದ ಪ್ರಸ್ತಾವನೆಯನ್ನು ಬರೆದು ಓದುಗರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅವರಿಗೆ ಅಕಾಡೆಮಿಯ ಪರವಾಗಿ ಕೃತಜ್ಞತೆಗಳು. ಹಾಗೆಯೇ ಈ ಪುಸ್ತಕವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ರಶ್ಮಿ ಮುದ್ರಣದವರಿಗೆ ನಮ್ಮ ನೆನಕೆಗಳು.

( ಡಾ : ಎಚ್.ಜೆ. ಲಕ್ಕಪ್ಪಗೌಡ )

ಅಧ್ಯಕ್ಷರು

ದಲಿತರ ಪ್ರೇರಣಾ ಶಕ್ತಿಯಾಗಿರುವ
ಮಾನ್ಯ ಶ್ರೀ ಕೆ.ಬಿ. ಶಾಣಪ್ಪ ಅವರಿಗೆ
*ಗೌರವಪೂರ್ವಕ*

# ಪ್ರಸ್ತಾವನೆ

## ತತ್ವಪದ - ವಿಶ್ಲೇಷಣೆ

'ತತ್ವ' ಎಂದರೆ ಸಿದ್ಧಾಂತ, ಪರಮಾತ್ಮ, ನಿಜಸ್ಥಿತಿ ಎಂದರ್ಥವಾಗುತ್ತದೆ. ''ತತ್ವಜ್ಞಾನ ಮತ್ತು ಬ್ರಹ್ಮಜ್ಞಾನ'ವೆಂದು ಕರೆಯಲಾಗಿದೆ. 'ಪದ' ಎಂಬುದನ್ನು 'ಹಾಡು' 'ಹದಗೊಂಡ ಶಬ್ದ' ಎಂದು ಕರೆಯಲಾಗಿದೆ. ಪರಮಾತ್ಮನಿಗೆ ಸಂಬಂಧಿಸಿದ ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದ ಎನ್ನುತ್ತಾರೆ. 'ತತ್ವಪದ'ದಲ್ಲಿ ತತ್ವ ಮತ್ತು ಪದ ಇವೆರಡಕ್ಕೂ ಅರ್ಥಪೂರ್ಣವಾದ ಸಂಬಂಧವಿದೆ. 'ತತ್ವ' ವಸ್ತುವಾದರೆ 'ಪದ' ಅಭಿವ್ಯಕ್ತಿ ಮಾಧ್ಯಮ. ವಸ್ತು ಮತ್ತು ಅಭಿವ್ಯಕ್ತಿ ಇವೆರಡನ್ನೂ ಸಮನ್ವಯಗೊಳಿಸಿಕೊಂಡಿರುವ 'ತತ್ವಪದ' ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿರುವುದರ ಜತೆಗೆ ಸಂಸ್ಕೃತಿಯೊಂದರ ಪ್ರತೀಕವೂ ಆಗಿದೆ''. ಎನ್ನುವ ಡಾ॥ ಬಸವರಾಜ ಸಬರದ ಅವರ ತತ್ವಪದದ ವಿಶ್ಲೇಷಣೆ ಅರ್ಥಪೂರ್ಣವಾಗಿದೆ. (ಹೆಚ್ಚಿನ ವಿವರಕ್ಕಾಗಿ ನೋಡಿ 'ಗುಲಬರ್ಗಾ ಜಿಲ್ಲೆಯ ಅನುಭಾವಿ ಕವಿಗಳು' ಪುಟ. ೧. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಹಂಪಿ. ಲೇ : ಡಾ॥ ಬಸವರಾಜ ಸಬರದ)

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹುಟ್ಟಿಕೊಂಡ ತತ್ವಪದ ಸಾಹಿತ್ಯಕ್ಕೆ ತನ್ನದೇ ಆದ ಒಂದು ಪರಂಪರೆಯಿದೆ. ತತ್ವಪದ ಸಾಹಿತ್ಯ ಅಧಿಕೃತವಾಗಿ, ವಿಶೇಷ ಪ್ರಕಾರವಾಗಿ ಕಾಣಿಸಿಕೊಂಡಿದ್ದು 18-19ನೆಯ ಶತಮಾನದಲ್ಲಿ. ತತ್ವಪದಕಾರರು ರಚಿಸಿದ ರಚನೆಗಳಿಗೆ ತತ್ವಪದ ಸಾಹಿತ್ಯ, ಅನುಭಾವ ಸಾಹಿತ್ಯ, ಕೈವಲ್ಯ ಸಾಹಿತ್ಯ ಎಂದು ಕರೆಯಲಾಗಿದೆ. ಬದುಕಿನ ಘಟಿತ ಘಟನಾವಳಿಗೆ ಅನುಗುಣವಾಗಿ ಮೂಡಿಬಂದ ತಾತ್ವಿಕ ಮಾತು ತತ್ವಪದವಾಯಿತು. ಅನುಭವದಿಂದ ಕೂಡಿದ್ದ ತತ್ವಪದಗಳಿಗೆ ಅಥವಾ ಲೌಕಿಕ ಮತ್ತು ಅಲೌಕಿಕ ಬದುಕನ್ನು ಅರ್ಥೈಸುವಂತಹ ಅಭಿವ್ಯಕ್ತಿಗೆ ಭಜನಿ ಪದಗಳೆಂದೂ ಕರೆದಿದ್ದಾರೆ.

ವಿಭಿನ್ನ ಸ್ತರಗಳಿಂದ ಬಂದಂತಹ ತತ್ವಪದಕಾರರು ತಮ್ಮ ಬದುಕಿನ ಅನುಭಾವಗಳನ್ನು ವಸ್ತುನಿಷ್ಠವಾಗಿ ಭಕ್ತಿ, ಜ್ಞಾನ, ವೈರಾಗ್ಯದ ನೆಲೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಗುರುಭಕ್ತಿ, ಸದಾಚಾರ, ನೈತಿಕತೆ, ಜಾತ್ಯಾತೀತತೆ, ಭಾವೈಕ್ಯತೆ, ವಸಹಾತುಶಾಹಿಯಂತಹ ವಿಚಾರಗಳನ್ನು ಕುರಿತು ವಿವೇಚಿಸಿದ್ದಾರೆ.

ಅಂದಂದಿನ ಯುಗಧರ್ಮಕ್ಕೆ ತಕ್ಕಂತೆ ಜೈನ, ವೈದಿಕ ಮತ್ತು ವೀರಶೈವ ಸಾಹಿತ್ಯ ತಮ್ಮ ತಮ್ಮ ಮತ ತತ್ವಗಳ ಪ್ರತಿಪಾದನೆಯ ಮೂಲಕ ಸಾಂಸ್ಕೃತಿಕ ಸಮಾಜದ ಮೇಲೆ ಪ್ರಭಾವ ಬೀರಿದರೆ ತತ್ವಪದಕಾರರು ತಮ್ಮ ಅನುಭವವನ್ನು ತಾತ್ವಿಕವಾಗಿ ಕಟ್ಟಿಕೊಡುವುದರ ಮೂಲಕ ಗಮನ ಸೆಳೆದಿದ್ದಾರೆ. ಜೈನ, ವೀರಶೈವ, ಬ್ರಾಹ್ಮಣ ಕವಿಗಳು ತಮ್ಮ ಮತಸಿದ್ಧಾಂತಗಳಿಗೆ ಬದ್ಧವಾಗಿ ಅಭಿವ್ಯಕ್ತಿ ಪಡೆದುಕೊಂಡರೆ ತತ್ವಪದ ಸಾಹಿತ್ಯ ಮತ್ತು ಪಂಥಗಳನ್ನು ಮೀರಿ ವ್ಯಕ್ತಿನಿಷ್ಠ ಅನುಭವಕ್ಕೆ ಬದ್ಧವಾಗಿ ಅಭಿವ್ಯಕ್ತಿ ಪಡೆಯಿತು. ವಚನಕಾರರು ವ್ಯಕ್ತಿಯ ಅಸ್ತಿತ್ವವನ್ನು ಜ್ಞಾನದಲ್ಲಿ, ದಾಸರು ದೈವ ಭಕ್ತಿಯಲ್ಲಿ ಕಂಡರೆ ತತ್ವಪದಕಾರರು ವೈರಾಗ್ಯದಲ್ಲಿ ಮತ್ತು ಗುರುಭಕ್ತಿಯಲ್ಲಿ ಕಂಡಿದ್ದಾರೆ.

ಬೌದ್ಧರು 'ಆಶೆಯೇ ದುಃಖಕ್ಕೆ ಮೂಲ' ಎಂದು ಜೈನರು 'ಅಹಿಂಸೆಯೇ

ಪರಮಧರ್ಮ' ಎಂದು, ವೈದಿಕರು 'ಜಗತ್ತು ಮಿಥ್ಯ ದೇವರು ಸತ್ಯ' ಎಂದು ವೀರಶೈವರು 'ದಯವೇ ಧರ್ಮದ ಮೂಲವಯ್ಯ' 'ಕಾಯಕ-ದಾಸೋಹ ತತ್ವವೇ ಪರಮ ತತ್ವ' ಎಂದು ಸಾರಿದರೆ, ತತ್ವಪದಕಾರರು 'ಗುರುವೇ ಅರಿವು, ಅರಿಷಡ್ ವೈರಿಗಳನ್ನು ಗೆಲ್ಲುವುದೇ ಧರ್ಮ' ಎಂದು ಸಾರಿದರು. ಬೌದ್ಧರಿಗೆ ದೇವರ ಅಸ್ತಿತ್ವಕಿಂತಲೂ ಮನುಷ್ಯನ ಜನ್ಮ ಅವಸ್ಥೆಗಳ ಪರಿಣಾಮದ ಶೋಧ ಮುಖ್ಯವಾದರೆ ಜೈನರಿಗೆ ವ್ಯಕ್ತಿಯ ಕರ್ಮಬಂಧನ ಮತ್ತು ಬಿಡುಗಡೆಯ ಹುಡುಕಾಟ ಮುಖ್ಯವಾಗುತ್ತದೆ. ವೈದಿಕರಿಗೆ ದೇವರು ತನ್ನ ಒಡೆಯ ತಾನು ಆತನ ಸೇವಕ ಎಂಬುದು ಮುಖ್ಯವಾದರೆ ವೀರಶೈವರಿಗೆ ದೇವರು ಸಾಂಕೇತಿಕವಾಗಿದ್ದು ಶಕ್ತಿ ವಿಶಿಷ್ಟಾದ್ವೈತ ಭಾವದ ವ್ಯಕ್ತಿತ್ವದ ಬೆಳವಣಿಗೆ ಮುಖ್ಯವಾಗುತ್ತದೆ. ತತ್ವಪದಕಾರರಿಗೆ ಈಶ್ವರವಾದ ಅಸ್ತಿತ್ವವಾದಿಗಳಂತೆ ಆಸ್ತಿಕಭಾವವಿದ್ದರೂ ಅಮೂರ್ತ ರೂಪದ ದೇವರಿಗಿಂತಲೂ ಮೂರ್ತರೂಪದ ಗುರು ಮತ್ತು ಆತ್ಮಶೋಧನೆ ಮುಖ್ಯವಾಗುತ್ತದೆ. ವೀರಶೈವರು ಸಂಘಟನೆಗೊಂಡು ಧಾರ್ಮಿಕ ಸಾಮಾಜಿಕ ಚಳುವಳಿ ನಡೆಸಿದ್ದಾದರೆ, ತತ್ವಪದಕಾರರು ಯಾವುದೇ ರೀತಿಯ ಸಂಘಟನೆಯನ್ನು ಬಯಸದೆ ವ್ಯಕ್ತಿಗತ ನೆಲೆಯಲ್ಲಿ ಆಧ್ಯಾತ್ಮಿಕ ಸಾಧನೆ ಮಾಡಿರುವುದು ಕಂಡು ಬರುತ್ತದೆ.

ತತ್ವಪದಕಾರರು ಲೌಕಿಕ ರೀತಿಯಲ್ಲಿ ಬದುಕಿದರೂ ಅಲೌಕಿಕವಾಗಿ ಮಾತನಾಡುವುದರಿಂದ ಪ್ರಮುಖರಾಗುವುದಾಗಲೀ ಸಂಸಾರಿಕ ಸಂಬಂಧಗಳು ಕ್ಷಣಿಕ, ಹೆಣ್ಣು ಮಾಯೆ ಎಂದು ಅಲ್ಲಗಳೆಯುವುದರಿಂದ ಅಪ್ರಮುಖರಾಗುವುದಾಗಲೀ ಇಂದು ನಮಗೆ ಮುಖ್ಯವಾಗದೆ, ತತ್ವಪದಕಾರರು ವರ್ಣ-ವರ್ಗ, ಮತ-ಪಂಥ, ವಸಹಾತು ಶಾಹಿಗಳನ್ನು ಮೀರಿ ಬೆಳೆದು ನಿಲ್ಲುವುದರಿಂದ ಸಾಂಸ್ಕೃತಿಕವಾಗಿ ಮುಖ್ಯರಾಗುತ್ತಾರೆ. ಹೀಗಾಗಿ ವಚನಸಾಹಿತ್ಯ ಮತ್ತು ಕೀರ್ತನ ಸಾಹಿತ್ಯದಂತೆ ತತ್ವಪದ ಸಾಹಿತ್ಯವೂ ಪ್ರಸ್ತುತವೆನಿಸುತ್ತದೆ. ದ್ವೈತ-ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ - ಈ ಮತಗಳು ಮತೀಯ ಸಂಘರ್ಷದ ಹಿನ್ನೆಲೆಯಲ್ಲಿ ಹುಟ್ಟಿದ್ದರೆ, ತತ್ವಪದ ಸಾಹಿತ್ಯ ಅಂದಿನ ಮಾನಸಿಕ ಒತ್ತಡಗಳಿಗೆ ಪ್ರತಿಕ್ರಿಯೆಯಾಗಿ ಹುಟ್ಟಿದೆ.

## ರಾಯಚೂರು ಜಿಲ್ಲೆಯ ವೈಶಿಷ್ಟ್ಯತೆ

ಒಂದು ಪ್ರದೇಶದ ವೈಶಿಷ್ಟ್ಯತೆ ಆ ಪ್ರದೇಶದ ಸಾಂಸ್ಕೃತಿಕ ಮತ್ತು ಭೌಗೋಳಿಕ ಸಂಗತಿಗಳನ್ನು ಅವಲಂಬಿಸಿರುತ್ತದೆ. ಈ ದೃಷ್ಟಿಯಿಂದ ರಾಯಚೂರು ಜಿಲ್ಲೆ ಹೊರತಾಗಿಲ್ಲ. ಹಿಂದೂ-ಮುಸ್ಲಿಂ ಅರಸರ ಆಳ್ವಿಕೆಗೆ ಒಳಪಟ್ಟ ಈ ಪ್ರದೇಶ ರಾಜಸತ್ತೆ ಮತ್ತು ಧರ್ಮಸತ್ತೆಯ ಪರಸ್ಪರ ಘರ್ಷಣೆಯಿಂದ ಉಂಟಾದ ಬಿಸಿಯನ್ನು ತಾಗಿಸಿಕೊಂಡರೂ ಸುಟ್ಟು ಹೋಗದೆ ಭಾವೈಕ್ಯತೆ, ಸೌಹಾರ್ದತೆಯಂತಹ ಸಾಂಸ್ಕೃತಿಕ ಮೌಲ್ಯಗಳ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿರುವುದು ರಾಯಚೂರು ಜಿಲ್ಲೆಯ ವೈಶಿಷ್ಟ್ಯವಾಗಿದೆ.

ರಾಯಚೂರ ಕೋಟೆಗೋಡೆಯ ಮೇಲಿರುವ ಕ್ರಿ.ಶ. 1294ರ ಕಾಕತೀಯ ಪ್ರಾಂತಾಧಿಕಾರಿ ಕೆತ್ತಿಸಿದ ಶಾಸನದಲ್ಲಿ ಈ ಊರನ್ನು 'ರಾಯಚೂರು' ಎಂದು ಹೆಸರಿಸಲಾಗಿದೆ. ಈ ರಾಯಚೂರು ಪದ ತೆಲುಗಿನ ಪ್ರಭಾವದಿಂದ 'ಯ' ಅಕ್ಷರವನ್ನು ಮಧ್ಯದಲ್ಲಿ ಸೇರಿಸಿಕೊಂಡು 'ರಾಯಚೂರು' ಆಗಿರಬೇಕು ಎಂದು ಡಾ॥ ಪಿ.ಬಿ. ದೇಸಾಯಿ ಅವರು ಶಾಸನಗಳನ್ನು ಆಧರಿಸಿ 'ರಾಯಚೂರು' ಪದದ ರೂಪನಿಷ್ಪತ್ತಿಯ ಕುರಿತು ವ್ಯಕ್ತಪಡಿಸಿದ ಅಭಿಪ್ರಾಯ

ಅರ್ಥ ಪೂರ್ಣವಾಗಿದೆ.

ರಾಯಚೂರ ಜಿಲ್ಲೆಯ ಪ್ರದೇಶಕ್ಕೆ 'ಎಡೆದೊರೆನಾಡು' 'ದೋ ಆಬ ಪ್ರದೇಶ' ಎಂಬ ಹೆಸರುಗಳಿವೆ. ಕೃಷ್ಣೆ ಹಾಗೂ ತುಂಗಭದ್ರೆ ಈ ಎರಡು ನದಿಗಳ ನಡುವೆ ಇರುವ ಈ ಪ್ರದೇಶಕ್ಕೆ ಎರಡು ತೊರೆಗಳ ನಡುವಿರುವ ನಾಡು, ಎಡೆತೊರೆನಾಡು ಎಂಬ ಹೆಸರು ಬಂದಿರಬೇಕು. ಹಿಂದಿನ 'ಎಡೆದೊರೆ ನಾಡಿನ' ಎಲ್ಲ ಪ್ರದೇಶವನ್ನು ಈಗಿನ ರಾಯಚೂರು ಜಿಲ್ಲೆ ಒಳಗೊಂಡಿದೆ. ಎಂದು ಭೌಗೋಳಿಕ ಹಿನ್ನೆಲೆಯಲ್ಲಿ ರಾಯಚೂರಿನ ಸ್ಥಳನಾಮದ ಮಹತ್ವವನ್ನು ಗುರುತಿಸುವ ಡಾ॥ ಬಸವರಾಜ ಸಬರದ ಅವರ ಅಭಿಪ್ರಾಯ ಉಲ್ಲೇಖನೀಯವಾಗಿದೆ.

ಕರ್ನಾಟಕದ ಅರಸು ಮನೆತನಗಳಾದ ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ, ಕಲಚೂರಿಗಳ, ಚೋಳರ, ಕಾಕತೀಯರ, ವಿಜಯನಗರದ ಅರಸರ ಹಾಗೂ ಮೊಗಲರ, ನಿಜಾಮರ ಆಡಳಿತಕ್ಕೆ ಒಳಪಟ್ಟ ರಾಯಚೂರು ಜಿಲ್ಲೆ ಸಾಂಸ್ಕೃತಿಕ ಸಮನ್ವಯತೆಯನ್ನು ಸಾಧಿಸಿದ್ದು ಗಮನಾರ್ಹವಾಗಿದೆ. ಈ ಜಿಲ್ಲೆಯಲ್ಲಿ ದೊರೆತ ಮೂರು ಅಶೋಕ ಶಿಲಾಶಾಸನಗಳಿಂದಾಗಿ ಈ ಜಿಲ್ಲೆ ಐತಿಹಾಸಿಕ ಮಹತ್ವವನ್ನು ಪಡೆಯಿತು. ಈ ನಾಡು ಹಟ್ಟಿಯಲ್ಲಿದ್ದ ಬಂಗಾರದ ಗಣಿಗಳಿಗೆ, ಹೊಸಪೇಟೆ ಜೇಗರಕಲ್ಲು, ಮಲ್ಲಾಪುರ ಪ್ರದೇಶದಲ್ಲಿ ದೊರೆಯುವ ವಜ್ರಗಳಿಗಾಗಿ ಹಾಗೂ ಗ್ರಾನೈಟ್ ಶಿಲೆಗಳಿಗೆ ಪ್ರಸಿದ್ಧವಾಗಿದೆ. ಶರಣರಿಗೆ, ದಾಸರಿಗೆ, ತತ್ವಪದಕಾರರಿಗೆ ಬೀಡಾದ ಈ ನಾಡು ಶಿವಭಕ್ತಿ-ಹರಿಭಕ್ತಿಗೆ, ಭಾವೈಕ್ಯತೆಗೆ, ಮಾನವೀಯ ಮೌಲ್ಯಗಳಿಗೆ ತವರುಮನೆಯಾಗಿದೆ.

ಹದಿನೆಂಟು - ಹತ್ತೊಂಬತ್ತನೇ ಶತಮಾನದ ಸಾಮಾಜಿಕ ಸಂದರ್ಭದಿಂದ, ಅಧಿಕಾರಶಾಹಿಯ ಆಳ್ವಿಕೆಯಿಂದ, ವಸಹಾತುಶಾಹಿಯ ಮೌಲ್ಯಗಳ ಸ್ವೀಕರಣ-ನಿರಾಕರಣದ ಪರಿಸ್ಥಿತಿಯಿಂದ, ಹಾಗೂ ರಜಾಕರ ಹಾವಳಿಯ ಮತೀಯ ಸಂಘರ್ಷದಿಂದ ಉಂಟಾದ ಪರಿಣಾಮಗಳನ್ನು ಕಣ್ಣಾರೆ ಕಂಡ ಅನುಭಾವಿಕವಿಗಳು ಆಧ್ಯಾತ್ಮಿಕ ನೆಲೆಯಲ್ಲಿ ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಈ ದಿಶೆಯಲ್ಲಿ ಚಿಂತನೆ ಮಾಡುವ ಅನೇಕ ಮಹತ್ವದ ಅನುಭಾವಿಕವಿಗಳನ್ನು ಕೊಟ್ಟ ರಾಯಚೂರು ಜಿಲ್ಲೆ ತತ್ವಪದ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದೆ.

## ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳ ಪರಂಪರೆ.

ಶಿಷ್ಟ ಮತ್ತು ಜಾನಪದ ಸಾಹಿತ್ಯ ಪರಂಪರೆಗೆ ಸೇರಿರುವ ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು ತತ್ವಪದಗಳನ್ನು ರಚಿಸಿದ್ದಾರೆ. ಈ ಪರಂಪರೆಯು 12ನೇ ಶ.ದ ಲಿಂಗಣ್ಣೊಡೆಯನ ಕಾಲದವರೆಗೆ ಮುಂದುವರೆದಿರುವುದನ್ನು ಕಾಣಬಹುದು. 12ನೇ ಶ.ದಿಂದ 17ನೇ ಶ.ದ ಅವಧಿಯಲ್ಲಿ ರಚನೆಗೊಂಡ ತತ್ವಪದ ಸಾಹಿತ್ಯವು ಶಿಷ್ಟ ಸಾಹಿತ್ಯ ಪರಂಪರೆಗೆ ಒಳಪಟ್ಟರೆ 17ನೇ ಶ. ದಿಂದ 19ನೇ ಶ.ದ ವರೆಗೆ ರಚನೆಗೊಂಡ ತತ್ವಪದ ಸಾಹಿತ್ಯವು ಜಾನಪದ ಸಾಹಿತ್ಯ ಪರಂಪರೆಗೆ ಒಳಪಟ್ಟಿದೆ. ಹುಲಿಯ ಮಹೇಶ್ವರಚಿಕ್ಕಯ್ಯ ಅವರು ಸ್ವರ ವಚನಗಳನ್ನು ರಚಿಸಿದರೆ ಕಲ್ಲೂರದ ಲಿಂಗಣ್ಣೊಡೆಯ ಅವರು 'ಬಾರಾಮಾಸ' ದಂತಹ ಕಾವ್ಯಾತ್ಮಕ ಕೃತಿಯನ್ನು ರಚಿಸಿದ್ದಾರೆ. ಈವರಿಬ್ಬರು ರಾಯಚೂರು ಜಿಲ್ಲೆಯ ಶಿಷ್ಟಸಾಹಿತ್ಯ

ಪರಂಪರೆಗೆ ಸೇರಿದ ಅನುಭಾವಿ ಕವಿಗಳು.

ಜಾನಪದ ಸಾಹಿತ್ಯ ಪರಂಪರೆಗೆ ಸೇರಿದ ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳ ತತ್ವಪದ ರಚನೆ ಕ್ರಿ.ಶ. 17ನೇ ಶ.ದ ಕೂಡಲೂರು ಬಸವಲಿಂಗ ಶರಣನಿಂದ ಪ್ರಾರಂಭವಾಗಿ ಕ್ರಿ.ಶ. 20ನೇ ಶ.ದ ಕಲ್ಮಲಾದ ತಾಯಣ್ಣವರೆಗೂ ಮುಂದುವರೆದುಕೊಂಡು ಬಂದಿದೆ. ಸ್ವತಂತ್ರ್ಯ ಪೂರ್ವದಲ್ಲಿದ್ದ ಒಟ್ಟು 23 ತತ್ವಪದಕಾರರು ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳಾಗಿದ್ದಾರೆ. ಇವರೆಲ್ಲರ ತತ್ವಪದ ಸಾಹಿತ್ಯವು ವೈವಿಧ್ಯಮಯ ಅನುಭಾವದ ಅಭಿವ್ಯಕ್ತಿಯಾಗಿದೆ. ಇವರಲ್ಲಿ ಮುಸ್ಲಿಂರು, ಮಹಿಳೆಯರು, ದಲಿತರು ತತ್ವಪದಕಾರರಾಗಿದ್ದಾರೆ. (ಹೆಚ್ಚಿನ ವಿವರಕ್ಕೆ ನೋಡಿ ''ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು'' ಲೇ: ಡಾ॥ ಬಸವರಾಜ ಸಬರದ)

ರಾಯಚೂರು ಜಿಲ್ಲೆಯ ಒಟ್ಟು 23 ತತ್ವಪದಕಾರರಲ್ಲಿ ನಾಲ್ಕುಜನ ತತ್ವಪದಕಾರರು ದಲಿತ ಜನಾಂಗದಿಂದ ಬಂದವರಾಗಿದ್ದಾರೆ. ಈ ನಾಲ್ವರ ಸಂಕ್ಷಿಪ್ತ ಪರಿಚಯದೊಂದಿಗೆ ಇವರ ತತ್ವಪದಗಳನ್ನು ಸಂಗ್ರಹಿಸಿ ಕೊಡಲಾಗಿದೆ. ರಾಜೂರು ಹನುಮೇಶಪ್ಪನ ಪ್ರೇರಣೆಯಿಂದ ತಿಪ್ಪಣ್ಣತಾತ ತತ್ವಪದಕಾರನಾದಂತೆ, ತಿಪ್ಪಣ್ಣ ತಾತನ ಅನುಭಾವದ ವಿಚಾರದಿಂದ ಪ್ರೇರಿತರಾಗಿ ಹೊಸೂರು ತಿಪ್ಪಣ್ಣ, ಕಲ್ಮಲಾ ತಾಯಣ್ಣ, ಯೆರಮಾರೆಪ್ಪ ಇವರೆಲ್ಲರೂ ತತ್ವಪದಕಾರರಾಗಿದ್ದಾರೆ. ತಮ್ಮ ಹಾಡುಗಳಲ್ಲಿ ದೀಕ್ಷಾಗುರು ತಿಪ್ಪಣ್ಣ ತಾತನನ್ನು ಸ್ಮರಿಸುವುದರ ಜೊತೆಯಲ್ಲಿ ರಾಜೂರು ಹನುಮೇಶಪ್ಪನನ್ನು ಸ್ತುತಿಸಿದ್ದಾರೆ.

ತಿಪ್ಪಣ್ಣ ತಾತನಿಗೆ ರಾಜೂರು ಹನುಮೇಶಪ್ಪನು ದೀಕ್ಷಾ ಗುರುವಾದರೆ ಉಳಿದ ಮೂವರು ದಲಿತ ತತ್ವಪದಕಾರರಿಗೆ ತಿಪ್ಪಣ್ಣ ತಾತಾ ಪ್ರೇರಣಾ ಗುರುವಾಗಿದ್ದಾನೆ. ರಾಯಚೂರು ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ರಾಜೂರು ಗ್ರಾಮದಲ್ಲಿ 1892ರಲ್ಲಿ ಜನಿಸಿದ್ದ ಮಾದರ ಮನೆತನದ ಹನುಮೇಶಪ್ಪ ಶರಣನಾಗಿ ಹೋಗಿದ್ದಾನೆ. ಈತ ಪವಾಡ ಪುರುಷನಾಗಿದ್ದನೆಂದು ಹೇಳುತ್ತಾರೆ. ಈ ಹನುಮೇಶಪ್ಪ ರಾಯಚೂರಿಗೆ ಬಂದಿದ್ದನಂತೆ ಆಗ ರಾಯಚೂರಿನ ಜಹಿರಾಬಾದದಲ್ಲಿ ಉಳಿದುಕೊಂಡಿದ್ದನಂತೆ. ಈತನನ್ನು ಅಲ್ಲಮ ಪ್ರಭುವಿನ ಅವತಾರವೆಂದು ಜನ ನಂಬುತ್ತಾರೆ. ಈತ ಕ್ರಿ.ಶ. 1985ರಲ್ಲಿ ಲಿಂಗೈಕ್ಯನಾದ. ಈತನ ಸಮಾಧಿ ರಾಜೂರದಲ್ಲಿದೆ. ಈತನ ಗುಡಿ ರಾಯಚೂರ ನಗರದ ಜಹಿರಾಬಾದದಲ್ಲಿದೆ. ಶ್ರೀ ಸದ್ಗುರು ಶೂನ್ಯಸಿಂಹಾಸನ ಪ್ರಕಾಶಪ್ರಭು ಲೀಲೆಯ ಅನುಭವ ಮಂಟಪವೆಂದು ಇದನ್ನು ಕರೆಯುತ್ತಾರೆ. ಈ ಹನುಮೇಶಪ್ಪನು, ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಚಂದಾಹುಸೇನಸಾಬರ ಶಿಷ್ಯನಾಗಿದ್ದನೆಂಬುದು ಗಮನಾರ್ಹ. ಇಂತಹ ಹನುಮೇಶಪ್ಪನಂತಹ ಅನುಭಾವಿಯಿಂದ, ರಾಯಚೂರಿನ ಅನೇಕರು ದೀಕ್ಷಾ ಪಡೆದು ಆಧ್ಯಾತ್ಮದ ಹಾದಿ ಹಿಡಿದಿದ್ದಾರೆ. ಅವರಲ್ಲಿ ಮಾದಿಗರ ಜನಾಂಗದಿಂದ ಮೇಲೆದ್ದು ಬಂದವರು ತಿಪ್ಪಣ್ಣ ತಾತಾ, ಯರಮಾರೆಪ್ಪ, ಹೊಸೂರು ತಿಪ್ಪಣ್ಣ ಮುಖ್ಯರಾಗಿದ್ದಾರೆ. [1]ಯರಮಾರೆಪ್ಪ, ಹೊಸೂರು ತಿಪ್ಪಣ್ಣ, ಕಲ್ಮಲಾ ತಾಯಣ್ಣ -ಇವರು ತಿಪ್ಪಣ್ಣ ತಾತಾನ ಶಿಷ್ಯರಾಗಿದ್ದಾರೆ.

---

1. 'ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು', ಲೇ: ಡಾ॥ ಬಸವರಾಜ ಸಬರದ

**ತತ್ವಪದಕಾರರ ಸಂಕ್ಷಿಪ್ತ ಪರಿಚಯ ಹಾಗೂ ಅವರ ತತ್ವಪದ ಸಾಹಿತ್ಯದ ವಿಶಿಷ್ಟತೆ.**

**೧. ತಿಪ್ಪಣ್ಣತಾತಾ:**

ತಿಪ್ಪಣ್ಣ ರಾಯಚೂರು ತಾಲೂಕಿನ ಮಲಿಯಾಬಾದ ಗ್ರಾಮದಲ್ಲಿ ಕ್ರಿ.ಶ. 1940ರಲ್ಲಿ ಜನಿಸಿದನು. ಈತನ ತಂದೆ ಫಕೀರಪ್ಪ ಮತ್ತು ತಾಯಿ ಲಕ್ಷ್ಮಮ್ಮ ಈತನ ಮೊದಲನೇ ಹೆಂಡತಿ ಮನೋರಮಾ ಗಂಡು ಮಗುವಿಗೆ ಜನ್ಮಕೊಟ್ಟು ತೀರಿಕೊಂಡಳು. ಆನಂತರ ತಿಪ್ಪಣ್ಣ ಎರಡನೇ ಮದುವೆ ಮಾಡಿಕೊಂಡನು. ಎರಡನೇ ಹೆಂಡತಿಯಾದ ಶರಣಮ್ಮಳೊಂದಿಗೆ ಸಂಸಾರ ಮಾಡುತ್ತಿದ್ದಾನೆ. ಈ ದಂಪತಿಗಳಿಗೆ ಐದು ಮಕ್ಕಳಿದ್ದಾರೆ. ಐದು ಮಕ್ಕಳಲ್ಲಿ ನಾಲ್ಕು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳಿದ್ದಾಳೆ.

ಮಾದಿಗರ ಜನಾಂಗದಲ್ಲಿ ಹುಟ್ಟಿದ ತಿಪ್ಪಣ್ಣ ತಾತಾನ ಗುರು ರಾಜೂರು ಹನುಮೇಶಪ್ಪ. ಈತನು ರಾಯಚೂರು ಜಿಲ್ಲೆಯ ಯಲಬುರ್ಗಾ ತಾಲೂಕಿನ ರಾಜೂರ ಗ್ರಾಮದವನು ಹಾಗೂ ಮಾದಿಗರ ಜನಾಂಗಕ್ಕೆ ಸೇರಿದವನು. ತಿಪ್ಪಣ್ಣ ಗುರು ಹನುಮೇಶನಿಂದ ದೀಕ್ಷೆ ಪಡೆದ ನಂತರ ತಿಪ್ಪಣ್ಣನಾಗಿದ್ದವನು ತಿಪ್ಪಣ್ಣ ತಾತನಾದನು. ಹೀಗಾಗಿ ಜನರು ಈತನನ್ನು ತಿಪ್ಪಣ್ಣ ತಾತಾನೆಂದು ಕರೆಯುತ್ತಾರೆ. ಈತ ರಾಯಚೂರು ನಗರದ ಮಂಗಳವಾರ ಪೇಟೆ ಸರಕಾರಿ ಶಾಲೆಯಲ್ಲಿ ಇಂದಿಗೂ ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದಾನೆ. ಒಂದು ಕಡೆ ಈತನು ಶಾಲಾ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸುವ ಗುರುವಾದರೆ ಮತ್ತೊಂದೆಡೆ ಭಕ್ತ ಜನರಿಗೆ ಆತ್ಮೋನ್ನತಿಯ ಮಾರ್ಗವನ್ನು ತೋರಿಸುವ ಗುರುವಾಗಿದ್ದಾನೆ.

ರಾಯಚೂರು ನಗರದ ಜಹಿರಾಬಾದ ಪ್ರ 'ಶ್ರೀ ಸದ್ಗುರು ಶರಣ ಬಸವೇಶ್ವರ ಶೂನ್ಯ ಸಿಂಹಾಸನದ ಪ್ರಕಾಶನ ಪ್ರಭುಲೀಲೆಯ ಅನುಭವ ಮಂಟಪವಿದೆ. ಈ ಮಂಟಪಕ್ಕೆ ಸಂಬಂಧಿಸಿದ ಧಾರ್ಮಿಕ ಕಾರ್ಯಗಳೆಲ್ಲವೂ ತಿಪ್ಪಣ್ಣ ತಾತನ ನೇತೃತ್ವದಲ್ಲಿ ನಡೆಯುತ್ತವೆ. ಅನುಭವ ಮಂಟಪದ ವೇದಿಕೆಯ ಮೇಲೆ ಗುರು ಹನುಮೇಶನ ಭಾವಚಿತ್ರವಿದೆ. ವೇದಿಕೆಯ ಕೆಳಗಡೆ ನೆಲಮನೆಯಿದೆ. ಆ ನೆಲಮನೆಯಲ್ಲಿ ತಿಪ್ಪಣ್ಣ ತಾತಾ ಭಕ್ತರಿಗೆ ದೀಕ್ಷೆ ನೀಡುತ್ತಾನೆ. ಜಾತಿಭೇದವಿಲ್ಲದೆ ಬರುವ ಅನೇಕ ಭಕ್ತರಿಗೆ ಮಾರ್ಗದರ್ಶನ ಮಾಡುತ್ತಾನೆ. ಅವರ ಜೊತೆಯಲ್ಲಿ ಅನುಭಾವದ ಬುತ್ತಿಯನ್ನು ಹಂಚಿಕೊಳ್ಳುತ್ತಾನೆ. ಶಿವಭಕ್ತಿ-ಗುರುಭಕ್ತಿ ಜೀವ-ಆತ್ಮಗಳ ಸಂಬಂಧದ ಮಹತ್ವವನ್ನು ಭಕ್ತರಿಗೆ ತಿಳಿಸುತ್ತಾನೆ. ಲೌಕಿಕ ಬದುಕಿನೊಂದಿಗೆ ಆತ್ಮೋನ್ನತಿಯನ್ನು ಸಾಧಿಸುವ ವಿಚಾರವನ್ನು ಸರಳವಾದ ಮಾತಿನಲ್ಲಿ ಭಕ್ತಜನರಿಗೆ ತಿಳಿಸುತ್ತಾನೆ. ತಾತನಿಗೆ ದೇಹ ದಂಡನೆ, ಮನೋನಿಗ್ರಹದಿಂದ ಮಾಡುವ ಯೋಗಸಾಧನೆಗಿಂತಲೂ ಅಂತರಂಗ-ಬಹಿರಂಗ ಶುದ್ಧಿಯಿಂದ ಮಾಡುವ ಶಿವಯೋಗ ಮುಖ್ಯವಾಗುತ್ತದೆ.

12ನೇ ಶ.ದ ವಚನಕಾರ ಅಲ್ಲಮನ ತಾತ್ವಿಕ ನೆಲೆಯಲ್ಲಿ ಚಿಂತಿಸುವ ತಿಪ್ಪಣ್ಣ ತಾತಾ ಅನೇಕ ಹಾಡುಗಳನ್ನು ರಚಿಸಿದ್ದಾನೆ. ಈತನ ಹಾಡುಗಳನ್ನು ರಾಯಚೂರಿನ ಭಜನಿ ಮಂಡಳಿಗಳಲ್ಲಿ ಇಂದಿಗೂ ಹಾಡುತ್ತಾರೆ. ಈತನ ತತ್ವಪದಗಳ ಅಂಕಿತನಾಮ 'ಶ್ರೀ ಗುರು ಹನುಮೇಶ' ಎಂಬುದಾಗಿದೆ. ಈತನ ಅನೇಕ ಶಿಷ್ಯರು ತತ್ವಪದಗಳನ್ನು ರಚಿಸಿದ್ದಾರೆ.

'ಎಲ್ಲಿ ಹಾನ ದೇವನು । ಎಲ್ಲಿ ಹಾನ'
'ದೇವನಲ್ಲಾವೇನು । ಸದ್ಗುರು ಮಹಾ'

ಎಂದು ದೇವರ ಅಸ್ತಿತ್ವವನ್ನು ಕುರಿತು ಪ್ರಶ್ನಿಸುವುದರ ಜೊತೆಯಲ್ಲಿ ದೇವರ ಅಸ್ತಿತ್ವದ ಅರಿವನ್ನು ಗುರುವಿನಲ್ಲಿ ಕಾಣುವ ಚಿತ್ರಣವಿದೆ. ತಾತನ ಮಾತು ಆಸ್ತಿಕರಿಗೆ ನಿರಾಶೆಯನ್ನುಂಟು ಮಾಡಿದರೆ ನಾಸ್ತಿಕರಿಗೆ ವಿಚಾರ ಯೋಗ್ಯವಾಗಿದೆ. 'ದೇವನಲ್ಲಾವೇನು ಸದ್ಗುರು ಮಹಾ' ಎಂದು ವಿನಯದಿಂದ ಉತ್ತರಿಸುವ ತತ್ವಪದಕಾರನ ನಾಸ್ತಿಕತ್ವದ ವಿಚಾರದಲ್ಲಿರುವ ಆಸ್ತಿಕತ್ವದ ಭಾವ ಗಮನಾರ್ಹವಾಗಿದೆ. ಸದ್ಗುರುವೇ ದೇವರೆಂಬ ವಿಚಾರ ಪಾರಂಪರಿಕವಾಗಿದ್ದರೂ ವ್ಯಕ್ತಿನಿಷ್ಠ ಮಹತ್ವವನ್ನು ಪಡೆಯುತ್ತದೆ.

ಗುರುವೇ ದೇವರು, ದೇವರೆ ಗುರು ಎಂಬ ತತ್ವಪದಕಾರನ ವಿಚಾರ ಅರ್ಥಪೂರ್ಣವಾಗಿದೆ. ಮೂರ್ತದಲ್ಲಿ ಅಮೂರ್ತವನ್ನು ಕಾಣುವುದಾಗಲಿ, ಅಮೂರ್ತದಲ್ಲಿ ಮೂರ್ತರೂಪವನ್ನು ಕಾಣುವ ವಿಚಾರ ಭಾರತೀಯ ಸಂಸ್ಕೃತಿಯ ದ್ಯೋತಕವಾಗಿದೆ. ಗುರುವಿನ ಕೃಪೆ, ಸಾಮಿಪ್ಯ, ಸಂಬಂಧ ಪಡೆಯುವದರಿಂದ ಆತ್ಮೋನ್ನತಿ ಉಂಟಾಗಲು ಸಾಧ್ಯವೆಂಬ ನಂಬಿಕೆ ಸಾಮಾನ್ಯವಾಗಿ ಎಲ್ಲಾ ತತ್ವಪದಕಾರರಲ್ಲಿ ಕಂಡು ಬರುತ್ತದೆ. ಮೂರ್ತರೂಪದ ಗುರುವಿಗೆ ಶರಣರು ಪ್ರಾಮುಖ್ಯತೆ ನೀಡಿದರೆ ದಾಸರು ಅಮೂರ್ತರೂಪದ ದೇವರಿಗೆ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಹೀಗಾಗಿ ಶರಣರ ಮತ್ತು ದಾಸರ ಮೂರ್ತ ಅಮೂರ್ತದ ವಿಚಾರಗಳಿಂದ ಪ್ರಭಾವಿತರಾದ ತತ್ವಪದಕಾರರು ದೇವರನ್ನು ಹಾಗು ಗುರುವನ್ನು ಜೊತೆಯಲ್ಲಿಯೇ ಸ್ಮರಿಸುವುದು ಕಂಡು ಬರುತ್ತದೆ. ದಾಸರಂತೆ ಸಂಸಾರ ಮಾಯೆ ಎಂದು ಹೇಳಿದರೆ ಶರಣರಂತೆ ನಡೆ-ನುಡಿ ಒಂದಾಗಿರಬೇಕು, ಶುದ್ಧವಾಗಿರಬೇಕು, ಅರಿವಿನಿಂದ ಕೂಡಿರಬೇಕೆಂದು ತತ್ವಪದಕಾರನು ತಿಳಿಸುತ್ತಾನೆ. ಅನುಭಾವವನ್ನು ಪ್ರತಿಮೆ-ಸಂಕೇತಗಳ ಮೂಲಕ, ಪಾರಿಭಾಷಿಕ ಪದಗಳ ಮೂಲಕ ಅಣ್ಣ, ಅವ್ವ, ತಂಗಿ ಎಂದು ಸಂಬೋಧಿಸಿ ಹೇಳುವ ರೀತಿ ಆತ್ಮೀಯವಾಗಿದೆ. ಲೌಕಿಕ ಸಂಬಂಧ ಸೂಚಕ ಪದಗಳನ್ನು ಬಳಸುತ್ತಲೇ ಅಲೌಕಿಕ ಅನುಭಾವದ ವಿಚಾರವನ್ನು ವ್ಯಕ್ತಪಡಿಸುತ್ತಾನೆ. ಜೀವ-ಆತ್ಮದ ಸಂಬಂಧದ ಕುರಿತು ಹೇಳುತ್ತಾನೆ. ತಿಪ್ಪಣ್ಣ ತಾತಾನ ತತ್ವ ಪದಗಳಲ್ಲಿ ಆತ್ಮಜ್ಞಾನ ಗುರುಮಹಿಮೆ ಯೋಗ ವಿಚಾರಗಳೇ ಪ್ರಧಾನವಾಗಿವೆ. ಅನುಭಾವದ ಎತ್ತರಕ್ಕೆ ಏರಿ ಮಾತನಾಡುವ ತಾತಾ ಸಾಮಾಜಿಕ ಸಂಗತಿಗಳತ್ತ ಗಮನ ಹರಿಸಿಲ್ಲ.

## ೨. ಯರಮಾರೆಪ್ಪ

ರಾಯಚೂರು ನಗರದ ಗಾಜಗಾರ ಪೇಟೆಯ ನವಾಬಗಡ್ಡೆಯಲ್ಲಿ ತತ್ವ ಪದಕಾರ ಯರಮಾರೆಪ್ಪನು ಕ್ರಿ.ಶ. 1925ರಲ್ಲಿ ಜನಿಸಿದನು. ಈತನ ತಂದೆ ತಿಕ್ಕಯ್ಯ ಮತ್ತು ತಾಯಿ ಸವರಮ್ಮ ಇವರು ರಾಯಚೂರು ಜಿಲ್ಲೆಯವರು ಮಾದರ ಜಾತಿಯವರಾದ ಈ ದಂಪತಿಗಳು ತಮ್ಮ ಮಗನಾದ ಯರಮಾರೆಪ್ಪನಿಗೆ ಹೆಚ್ಚಿನ ಶಿಕ್ಷಣವನ್ನು ಕೊಡಿಸಲಾಗದೆ ಎರಡನೇ ತರಗತಿಯವರೆಗೆ ಮಾತ್ರ ಓದಿಸಿದರು. ಕನ್ನಡ ಮತ್ತು ಉರ್ದು ಭಾಷೆಗಳಲ್ಲಿ ಅಕ್ಷರ ಅಭ್ಯಾಸವನ್ನು ಮಾಡಿಸಿದರು. ಹೀಗಾಗಿ ಯರಮಾರೆಪ್ಪನು ಕನ್ನಡ ಮತ್ತು ತೆಲುಗು ಎರಡು ಭಾಷೆಗಳಲ್ಲಿ ತತ್ವಪದಗಳನ್ನು ರಚಿಸಿದ್ದಾನೆ. ಈತನು ರಾಯಚೂರು ಜಿಲ್ಲೆಯ ಪ್ರಥಮ ದಲಿತ ತತ್ವಪದಕಾರ.

ಯರಮಾರೆಪ್ಪನ ಕಾಯಕನಿಷ್ಠೆ, 12ನೇ ಶ.ದ ಮಾದರ ಚನ್ನಯ್ಯ, ಮಾದರ

ಘೂಳಯ್ಯ ಮತ್ತು ಹರಳಯ್ಯ ವಚನಕಾರರ ಕಾಯಕತತ್ತ್ವವನ್ನು ನೆನಪಿಸುತ್ತದೆ. ತತ್ವಪದಕಾರನು ತನ್ನ ಕುಲಕಸುಬಿನ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾನೆ. ಈತನಿಗೆ ಜಹಿರಾಬಾದ ತಿಪ್ಪಣ್ಣ ತಾತಾನೇ ಗುರು ಕಾಯಕವೇ ಕೈಲಾಸ. ತನ್ನ ಸೋದರ ಮಾವನ ಮಗಳಾದ ಚಂದ್ರಮ್ಮನನ್ನು ಮದುವೆಯಾದನು. ಚಂದ್ರಮ್ಮ ತಾಯಿತನದ ಸುಖವನ್ನು ಅನುಭವಿಸಲಿಲ್ಲ. ತಮಗೆ ಮಕ್ಕಳಿಲ್ಲದಿದ್ದರೂ 'ದತ್ತಕ' ಪದ್ಧತಿಯನ್ನು ಸ್ವೀಕರಿಸಲಿಲ್ಲ. ಅವರಲ್ಲಿ ಬಂಜೆತನದ ಭಾವ ಸುಳಿಯಲಿಲ್ಲ. 'ಸತಿ-ಪತಿಗಳ ಒಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬ ಶರಣರ ನುಡಿಯಂತೆ ದಂಪತಿಗಳಿಬ್ಬರೂ ಬದುಕುತ್ತಿದ್ದಾರೆ. ಯರಮಾರೆಪ್ಪ ಮೋಚಿ ಕಾಯಕವನ್ನು ಮಾಡುತ್ತಾನೆ.

ಯರಮಾರೆಪ್ಪನು ದೇಶಭಕ್ತನು ಮತ್ತು ಕಾಂಗ್ರೆಸ್ಸ್ ಪಕ್ಷದ ಅಭಿಮಾನಿಯೂ ಆಗಿದ್ದನು. ರಜಾಕಾರ ಹಾವಳಿಯಲ್ಲಿ ಗಾಂಧಿಟೋಪಿ ಹಾಕಿದ್ದಕ್ಕಾಗಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ 15 ದಿವಸ ರಾಯಚೂರಿನ ಜೈಲುವಾಸವನ್ನು ಅನುಭವಿಸಿದ್ದನು. ಮೂರು ವರ್ಷ ಪೇಶ್ಶಿಗಿಗಾಗಿ ಅಡ್ಡಾಡಿದ ಈತನಿಗೆ ಕೋರ್ಟು ಕಚೇರಿಗಳ ಅನುಭವವಿತ್ತು. ಆದರೂ ಸರಕಾರಿ ಅನುಭವವನ್ನು ತನ್ನ ಹಾಡುಗಳಲ್ಲಿ ಅಭಿವ್ಯಕ್ತಿಸದೆ ಆಧ್ಯಾತ್ಮ ಬದುಕಿನ ಅನುಭವವನ್ನು ಮಾತ್ರ ಹೇಳಿದ್ದಾನೆ. ರಾಯಚೂರಿನ ತಿಪ್ಪಣ್ಣ ತಾತಾನಿಂದ ದೀಕ್ಷೆ ಪಡೆದು ಕೊರಳಲ್ಲಿ ರುದ್ರಾಕ್ಷಿ ಧರಿಸಿದ ಈತನು ಗದ್ವಾಲದೊಳಗೆ ಸಾಕ್ಷಿ ಗುರುವಾಗಿದ್ದಾನೆ. ಗದ್ವಾಲದ ಭಕ್ತರಿಗೆ ತನ್ನ ತತ್ವಪದಗಳು ಅರ್ಥವಾಗಲೆಂದು ತೆಲುಗು ಭಾಷೆಯಲ್ಲಿ ಹಾಡುಗಳನ್ನು ರಚಿಸಿದ್ದಾನೆ. 'ಹನುಮಂತೇಶ ತಿಪ್ಪಣ್ಣ ತಾತಾ' ಎಂಬುದು ಈತನ ಅಂಕಿತವಾಗಿದೆ.

''ಯರಮಾರೆಪ್ಪನಿಗೆ ರಾಜೂರು ಹನುಮಂತೇಶ ಪ್ರೇರಣಾಗುರುವಾದರೆ, ಜಹಿರಾಬಾದದ ತಿಪ್ಪಣ್ಣ ತಾತಾ ದೀಕ್ಷಾಗುರು. ವಯಸ್ಸಿನಲ್ಲಿ ತಿಪ್ಪಣ್ಣ ತಾತಾ ಮಾರೆಪ್ಪನಿಗಿಂತ ಚಿಕ್ಕವನಾದರೂ, ದೀಕ್ಷಾಗುರುವಾಗಿರುವುದರಿಂದ ಮಾರೆಪ್ಪ ಕವಿಗೆ ಅನುಭಾವದೆತ್ತರದಲ್ಲಿ ಹಿರಿಯನಾಗಿ ಕಾಣಿಸುತ್ತಾನೆ. ಮಾರೆಪ್ಪ ತನ್ನ ತತ್ವಪದಗಳ ಅಂಕಿತದಲ್ಲಿ ಇಬ್ಬರೂ ಗುರುಗಳನ್ನು ಸ್ಮರಿಸಿದ್ದಾನೆ.''[2]

ವಚನಕಾರರ ಪ್ರಭಾವ ಅನ್ಯ ತತ್ವ ಪದಕಾರರ ಮೇಲೆ ಆದಂತೆ ತತ್ವಪದಕಾರ ಯರಮಾರೆಪ್ಪನ ಮೇಲೆಯೂ ಆಗಿದೆ. ಮನುಷ್ಯ ತನ್ನ ಮನಸ್ಸನ್ನು ಶುದ್ಧಗೊಳಿಸಿ ತನ್ನತನದ ಅರಿವು ಮೂಡಿಸಿಕೊಂಡು ಅಂತಃಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು, ಕಾಯಕ ಜೀವಿಯಾಗಿ ಬದುಕಬೇಕೆಂಬ ಆಶಯವನ್ನು ತತ್ವಪದಕಾರನು ತನ್ನ ಹಾಡುಗಳಲ್ಲಿ ದೃಷ್ಟಾಂತ ಮತ್ತು ಸಂಕೇತಗಳ ಮೂಲಕ ವ್ಯಕ್ತಪಡಿಸಿದ್ದಾನೆ. ಪರಮಾತ್ಮನಿಗಿಂತಲೂ ಜೀವಾತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾನೆ. ಜೀವಾತ್ಮದ ಇರುವಿಕೆಯ ಕುರಿತು ಚಿಂತಿಸಿದ್ದಾನೆ. ಮನುಷ್ಯನ ಬಾಹ್ಯ ಕ್ರಿಯಾಚರಣೆಗಳಿಗಿಂತಲೂ ಅಂತರಂಗದ ಶುದ್ಧತೆಯನ್ನು ಕಾಪಾಡಿಕೊಂಡು ಹೋಗಬೇಕೆಂಬ ಕಳಕಳಿಯನ್ನು ವ್ಯಕ್ತಪಡಿಸಿದ್ದಾನೆ. ಕಾಯಕದಲ್ಲಿ ಭೇದಭಾವಕಾಣದೆ ಪ್ರಾಮಾಣಿಕವಾಗಿ ಸತ್ಯಶುದ್ಧರಾಗಿ ಕಾಯಕದಲ್ಲಿ ನಿರತರಾಗಬೇಕೆಂಬ ಅರಿವನ್ನು ಜನರಲ್ಲಿ ಮೂಡಿಸುವುದೇ ಈ ತತ್ವಪದಕಾರನ ಉದ್ದೇಶವಾಗಿದೆ.

---

2. ''ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು'', ಲೇ: ಡಾ॥ ಬಸವರಾಜ ಸಬರದ

'ಹತ್ತಿಯ ಹೊಲದಾಗ ಎತ್ತು ಸತ್ತಾದ ಒಂದು
ಸತ್ಯ ಕತ್ತಿಯ ಹಿಡಿದು ಚರ್ಮವ ಸುಲಿ ತಂದು
ಸುಲಿದ ಚರ್ಮಕೆ ನಾನು ಸುಣ್ಣ ಧರಿಸಿದೆನು'.

ಎಂದು ಕಾಯಕವನ್ನು ಕುರಿತು ಹೇಳುವ ವಿಚಾರ ಆಧ್ಯಾತ್ಮಿಕವಾಗಿದೆ. ತಾನು ವೃತ್ತಿ ಮತ್ತು ಜಾತಿಯಿಂದ ಹೀನನಲ್ಲ ಎಂದು ಧ್ವನಿಸುವ ಯರಮಾರೆಪ್ಪನ ಮಾತು ಚಾತುರವರ್ಣ ವ್ಯವಸ್ಥೆಗೆ ಸವಾಲಾಗಿದೆ. ಗುರುವಿನ ನಾಮವನ್ನು ನೆನೆಯದೆಯಿರುವ ಮನುಷ್ಯನು ಹೀನನೇ ಹೊರತು ಕೆಳಜಾತಿಯಲ್ಲಿ ಹುಟ್ಟಿದವನು ಹೀನನಲ್ಲವೆಂಬ ಸಂಗತಿಯನ್ನು ಸ್ಪಷ್ಟಪಡಿಸುತ್ತಾನೆ. ತನ್ನ ಕಸುಬಿನಲ್ಲಿ ದೈವ ಭಾವವನ್ನು ಕಾಣುವ ತತ್ವಪದಕಾರನಿಗೆ ಕುಲಕ್ಕಿಂತಲೂ ಕಸುಬು ಮುಖ್ಯವಾಗುತ್ತದೆ.

ತತ್ವಪದಕಾರನು ತೆಲುಗು ಭಾಷೆಯಲ್ಲಿ ರಚಿಸಿದ "ಎಕ್ಕಡ ಉನ್ನಾಡು ರಾ ದೇವುಡು, ಚಿಕ್ಕಾಡು ದೊರಕಾಡು ರಾ" ಎಂಬ ತತ್ವಪದದಲ್ಲಿ ದೇವರ ಅಸ್ತಿತ್ವ ಮತ್ತು ಕರ್ಮಸಿದ್ಧಾಂತವನ್ನು ಕುರಿತು ಹೇಳಲಾಗಿದೆ. ದೇವರ ಇರುವಿಕೆಯನ್ನು ಸದಾಚಾರ, ಸದ್‌ವಿಚಾರಗಳಲ್ಲಿ ಕಾಣುವಂತೆ ಮತ್ತು ಕರ್ಮಸಿದ್ಧಾಂತವನ್ನು ಕ್ರಿಯೆಯಲ್ಲಿ ಒಳಗೊಳ್ಳುವಂತೆ ಹೇಳಿದ್ದಾನೆ. ದೇವರ ಅಸ್ತಿತ್ವ ಮತ್ತು ಕರ್ಮಸಿದ್ಧಾಂತದ ಬಗ್ಗೆ ಇರುವ ಸಾಂಪ್ರದಾಯಿಕ ವಿಚಾರಗಳನ್ನು ಅಲ್ಲಗಳೆಯುವುದರ ಮೂಲಕ ಯರಮಾರೆಪ್ಪ ತತ್ವಪದಕಾರನು ಪ್ರಗತಿಪರನಾಗಿ ಕಾಣುತ್ತಾನೆ.

೩. ಹೊಸೂರು ತಿಪ್ಪಣ್ಣ

ಹೊಸೂರು ತಿಪ್ಪಣ್ಣ ರಾಯಚೂರು ತಾಲೂಕಿನ ಹೊಸೂರು ಗ್ರಾಮದಲ್ಲಿ ಕ್ರಿ.ಶ. 1942ರಲ್ಲಿ ಜನಿಸಿದನು. ಈತನ ತಂದೆ ದರ್ಗಪ್ಪ ಮತ್ತು ತಾಯಿ ಮಲ್ಲಮ್ಮ. ಈತನ ಹೆಂಡತಿ ಶರಣಮ್ಮ. ಈಕೆಯೊಂದಿಗೆ ಸಂಸಾರಿಯಾಗಿರುವ ತಿಪ್ಪಣ್ಣನು ಅನುಭಾವಿ ಕವಿಯಾಗಿದ್ದಾನೆ. ಇವರಿಗೆ ನಾಲ್ಕು ಮಕ್ಕಳಿದ್ದಾರೆ. ಸಂಸಾರದ ಅನೇಕ ತೊಂದರೆಗಳ ನಡುವೆಯೂ ದೀಕ್ಷಾಗುರು ತಿಪ್ಪಣ್ಣ ತಾತಾನೊಂದಿಗೆ ಕೂಡಿ ಧಾರ್ಮಿಕ ಕಾರ್ಯಗಳಲ್ಲಿ ನಿರತನಾಗಿರುತ್ತಾನೆ. ಜಹಿರಾಬಾದದಲ್ಲಿರುವ ಅನುಭವ ಮಂಟಪದ ಕಾರ್ಯ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾನೆ.

ಮಾದಿಗರ ವಂಶದಲ್ಲಿ ಜನಿಸಿದ ಹೊಸೂರು ತಿಪ್ಪಣ್ಣ ಎಚ್.ಎಸ್.ಸಿ. ಪಾಸು ಮಾಡಿ, ಶಿಕ್ಷಕರ ತರಬೇತಿ ಹೊಂದಿರುವ ಈತನು ಸದ್ಯ ರಾಯಚೂರಿನ ಹಾಸ್ಮಿಯಾ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿದ್ದಾನೆ. 'ನವಪುರಜಾತ' ಎಂಬ ಅಂಕಿತದಲ್ಲಿ ತತ್ವಪದಗಳನ್ನು ರಚಿಸಿದ್ದಾನೆ. ಪ್ರತಿಯೊಂದು ಹಾಡಿನ ಅಂತ್ಯದಲ್ಲಿ ಗುರುಹನುಮೇಶನನ್ನು ಸ್ಮರಿಸಿದ್ದಾನೆ. ತನ್ನ ಗುರುವಿನ ಗುರುವನ್ನು ಸ್ಮರಿಸುವಲ್ಲಿ ತಿಪ್ಪಣ್ಣನ ಸೌಜನ್ಯ ವ್ಯಕ್ತವಾಗಿದೆ. ಈತನ ಅಪ್ರಕಟಿತ ತತ್ವಪದಗಳನ್ನು ಸಂಗ್ರಹಿಸಿ ಅದರ ಆಶಯವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಹೊಸೂರು ತಿಪ್ಪಣ್ಣನ ಒಟ್ಟು 19 ಹಾಡುಗಳಲ್ಲಿ 7 ಹಾಡುಗಳು ಗುರು ಮಹಿಮೆ ಕುರಿತಿವೆ. ಉಳಿದ ಹಾಡುಗಳು ಅನುಭಾವ ವಿಷಯಕ್ಕೆ ಸಂಬಂಧಿಸಿವೆ. ಗುರುವಿನ ಬೋಧನೆ ಹಾಗೂ ದೀಕ್ಷೆಯಿಂದ ತನ್ನಲ್ಲಿ ಉಂಟಾದ ಪರಿವರ್ತನೆಯ ಕುರಿತು ತಿಳಿಸುತ್ತಾನೆ. 'ಪರಮಾತ್ಮನ

ನೆಲೆ ತಿಳಿಯೋ' ಎಂದು ಭಕ್ತರನ್ನು ಉದ್ದೇಶಿಸಿ ಹೇಳುತ್ತಾನೆ. 'ನಾಲಿಗಿಲ್ಲದ ಗಂಟೆ ನುಡಿತಿದೆ ಕವನ ಆಲಿಸಿ ಅನುದಿನ ಮಾಡು ಸಾಧನ' ಎಂದು ಆಧ್ಯಾತ್ಮಿಕವಾಗಿ ನುಡಿಯುತ್ತಾನೆ.

"ಗಂಡನು ದೊರಕಿದಯ ನಗಮ್ಮ, ಮಂಡಲತ್ರಯ ಮೀರಿ ಇರುವಂಥ, ಗಂಡನೆಂದರೆ ಅವಾ ಪುಂಡನವ್ವ ತಂಗಿ ಅಖಂಡ ಮೂರುತಿಯಾಗಿರುವ", "ಬೇಡುತಿದೆ ಮನ ಪ್ರಿಯಕರನ ಎಡೆಬಿಡದೆನ್ನ ರಕ್ಷಿಸುವವನ ತವಕದಿ ಬಿಗಿದಪ್ಪಿ ಆಗಲು ಮಿಲನ ಹರಿವದು ಮುಂದಿನ ಭಾವ ಬಂಧನ" ಎಂದು ಭಾವನಾತ್ಮಕವಾಗಿ ನುಡಿಯುವಲ್ಲಿ ಅಲೌಕಿಕ ಶೃಂಗಾರ ಭಕ್ತಿಯ ಅಧ್ಯಾತ್ಮಿಕ ನಿಲುವು ವ್ಯಕ್ತವಾಗಿದೆ. "ಇದಾ ಎಂಥ ಗಂಡ ಸಿಕ್ಕ ನೋಡವ್ವ ಹಗಲು ರಾತ್ರಿ ಬಿಡನವ್ವ" ಎಂದು ತನ್ನ ಗಂಡನ ಪ್ರೀತಿಯ ಕುರಿತು ಬಣ್ಣಿಸಿ ಹೇಳುವಲ್ಲಿ ಅಲೌಕಿಕ ಆನಂದದ ಭಾವವಿದೆ.

ಗುರುವಿನ ಮಹತ್ವ-ಶರಣಸತಿ ಲಿಂಗ ಪತಿಯಂತಹ ತಾತ್ವಿಕ ವಿಚಾರಗಳನ್ನು ಶೃಂಗಾರ ಭಕ್ತಿಯ ಮೂಲಕ ಅಭಿವ್ಯಕ್ತಿಸುವ ರೀತಿ ಹೊಸದಾಗಿದೆ. ಅಲ್ಲಮ ಪ್ರಭುವಿನಂತಹ ಶರಣರನ್ನು ಸ್ಮರಿಸುವುದರ ಜೊತೆಯಲ್ಲಿ ಶಿವ, ಗಣಪ, ದತ್ತಾತ್ರೇಯ -ಈ ಮೊದಲಾದ ಪೌರಾಣಿಕ ದೇವತೆಗಳನ್ನು ಸ್ಮರಿಸುವ ವಿಚಾರ ಸಾಂಸ್ಕೃತಿಕ ದೃಷ್ಟಿಯಿಂದ ಮುಖ್ಯವಾಗಿದೆ.

## ೪. ಕಲ್ಮಲಾ ತಾಯಣ್ಣ

ಮಾದಿಗ ಜನಾಂಗಕ್ಕೆ ಸೇರಿದ ತಾಯಣ್ಣ, 1943ರಲ್ಲಿ ರಾಯಚೂರು ತಾಲೂಕ ಕಲ್ಮಲಾದಲ್ಲಿ ಜನಿಸಿದನು. ಬಿಂಗಾಣಿ ಎಂಬ ಅಡ್ಡ ಹೆಸರಿನ ಕುಟುಂಬದಲ್ಲಿ ಜನಸಿದ ಈತನು ಮ್ಯಾಟ್ರಿಕ್‌ದವರೆಗೆ ಓದಿದನು. ಸರಕಾರಿ ಕಂದಾಯ ಇಲಾಖೆಯಲ್ಲಿ ಎರಡನೇ ದರ್ಜೆ ಸಹಾಯಕನಾಗಿ ಸೇವೆ ಸಲ್ಲಿಸಿದ. ಈತನು ತನ್ನ ಹೆಂಡತಿ ಮತ್ತು ಮೂವರು ಮಕ್ಕಳೊಂದಿಗೆ ಸುಮಾರು ಕಾಲದವರೆಗೆ ಬದುಕಿ 20-6-1980 ರಂದು ನಿಧನ ಹೊಂದಿದನು.

ಜಹಿರಾಬಾದ ತಿಪ್ಪಣ್ಣ ತಾತನ ಶಿಷ್ಯನಾಗಿದ್ದ ತಾಯಣ್ಣ ಅನೇಕ ತತ್ವಪದಗಳನ್ನು ರಚಿಸಿದ್ದಾನೆಯೆಂದು ತಿಳಿದು ಬರುತ್ತದೆ. ಆದರೆ ಈತನ ಮೂರು ತತ್ವಪದಗಳು ಮಾತ್ರ ದೊರಕಿವೆ. ಈತನ ತತ್ವಪದದ ಅಂಕಿತನಾಮ 'ಕಲ್ಮಲಾ ತಾಯಣ್ಣ' ಮತ್ತು 'ಗುರುತಿಪ್ಪಣ್ಣ' ಎಂಬುದಾಗಿದೆ.

ದೇವರ ಸ್ವರೂಪವನ್ನು ಕುರಿತು ತಾಯಣ್ಣ ವ್ಯಕ್ತಪಡಿಸಿದ ವಿಚಾರ ಮೌಲಿಕವಾಗಿದೆ. ಪುರಾಣಗಳಲ್ಲಿರುವ ದೇವರ ಕಲ್ಪನೆಗೂ ತತ್ವಪದಕಾರನ ದೇವರ ಕಲ್ಪನೆಗೂ ವ್ಯತ್ಯಾಸವಿದೆ. ಪುರಾಣದ ದೇವತೆಗಳು ನಾನಾರೂಪ, ಗುಣ ಭಾವಗಳನ್ನು ಪಡೆದು ವಿಜೃಂಭಿಸಿದರೆ ಕವಿ ಕಲ್ಪನೆಯ ದೇವರು ನಿರಾಕಾರನು, ನಿರ್ಭಾವನು, ನಿಸ್ಸಂಗನು, ಮಾಯಾರಹಿತನು, ಭಾನುಪ್ರಕಾಶನು, ಅಖಂಡ ಮಹಿಮನು, ಸೃಷ್ಟಿ-ಲಯಕರ್ತನಾಗಿ ಶೋಭಿಸುವನೂ ಆಗಿದ್ದಾನೆ. 'ಕಲ್ಮಾಲಿ ತಾಯಣ್ಣನ ಅಂತರಂಗದ ಶಿವನು ಗುರುತಿಪ್ಪಣ್ಣ' ಎಂದು ತಾಯಣ್ಣ ಹೇಳಿಕೊಳ್ಳುವ ಭಾವದಲ್ಲಿ ಶರಣರ ವಿಚಾರಧಾರೆ ಅಡಗಿದೆ. ಶರಣರಂತೆ ಈತನಿಗೆ ದೇವಾಲಯದ ಗರ್ಭಗುಡಿಯಲ್ಲಿರುವ ಶಿವನಿಗಿಂತಲೂ ತನ್ನ ಅಂತರಂಗದಲ್ಲಿರುವ ಶಿವಸ್ವರೂಪಿ ಗುರು ತಿಪ್ಪಣ್ಣ ಮುಖ್ಯನಾಗುತ್ತಾನೆ. ಗುರು-ಶಿಷ್ಯರ ಸಂಬಂಧವನ್ನು 'ಶರಣಸತಿ-ಲಿಂಗಪತಿ'ಯೆಂಬ ಶರಣರ ತಾತ್ವಿಕ ವಿಚಾರದ ಹಿನ್ನೆಲೆಯಲ್ಲಿ ಅಲೌಕಿಕ ಶೃಂಗಾರಭಕ್ತಿಯ ಅನುಭಾವದ ನೆಲೆಯಲ್ಲಿ ಹೇಳುತ್ತಾನೆ. ಪ್ರಾಪಂಚಿಕ ವಿಷಯವನ್ನು ಆಧ್ಯಾತ್ಮಿಕವಾಗಿ ತಿಳಿಸುವ ರೀತಿ ವಿಶಿಷ್ಟವಾಗಿದೆ.

# ಪರಿವಿಡಿ

ಪ್ರಸ್ತಾವನೆ
ತಿಪ್ಪಣ್ಣ ಶಾತಾನ ತತ್ವಪದಗಳು
ಯರಮಾರೆಪ್ಪನ ತತ್ವಪದಗಳು
ಹೊಸೂರು ತಿಪ್ಪಣ್ಣನ ತತ್ವಪದಗಳು
ಕಲ್ಮಲಾ ಶಾಯಣ್ಣನ ತತ್ವಪದಗಳು

ಅನುಬಂಧ
1) ತತ್ವಪದಕಾರರ ಭಾವಚಿತ್ರಗಳು
2) ತತ್ವಪದಗಳ ಅಕಾರಾದಿ
3) ಪಾರಿಭಾಷಿಕ ಪದಗಳ ಅರ್ಥ

# ತಿಪ್ಪಣ್ಣ ತಾತಾನ ತತ್ವಪದಗಳು

## ೧

ಎಲ್ಲಿಹಾನ ದೇವನು । ಎಲ್ಲಿ ಹಾನ ।
ಈ ದೇಹದ ಗವಿಯೊಳು ಐದಾನ ॥ಪ॥
ನರರಿಗೆ ನರನು ಆಗ್ಯಾನು
ಬಲ್ಲಂಥ ಜ್ಞಾನಿಗೆ ಶಿವನಾಗ್ಯಾನ ।
ಆರುಮಂದಿ ಒಡಲೊಳು ಐದ್ಯಾನ ।
ಒಂಭತ್ತು ಬಾಗಿಲೊಳು ನಿಂತಾನ ।

ಐದು ವರ್ಣದ ಅರಿವೆ ಉಟ್ಯಾನ ॥೧॥
ಆರು ಆಭರಣವ ತೊಟ್ಯಾನ ॥
ಹೂವಿನ ಹಾರವು ಭರಸ್ಯಾನ ।
ಈ ಒಡಲೊಳು ಆತನು ಆಡತಾನ ॥೨॥

ದೇಹವೆಂಬ ಆಶ್ರಮದೊಳಗೈದಾನ ॥
ಗುರು ಶಿಷ್ಯರಿಗೆ ಉಪದೇಶ ಮಾಡುತಾನ ।
ಗುರು ತನ್ನ ಪಾದವ ಇಟ್ಯಾನ ।
ಗುರು ಪಾದದ ಮರ್ಮವ ಹೇಳುತಾನ ॥
ಆದಿಯೊಳು ಶಿಷ್ಯನು ಕುಂತಾನ ।
ಆರು ಗುಣಗಳು ಅಳಿದು ಹೋಗುತಾನ ॥೩॥

ಆರು ಮೂರು ಒಂಭತ್ತು ತಳಿತಾನ ।
ಹತ್ತು ಹನ್ನೊ ಹನ್ನೊಂದರೊಳಗಾಡುತಾನ ।
ಹನ್ನೊಂದಳಿದು ಆನಂದ ಸೇರುತಾನ ।
ಹನ್ನೆರಡಳಿದು ಆತ್ಮನೊಳು ಕೂಡುತಾನ ॥೪॥

ಬಲ್ಲಂಥ ಜ್ಞಾನಿಗೆ ಒಲಿತಾನ ।
ಬಗೆಯದ ನರರಿಗೆ ಅರಿಯನು ।
ಈ ದೇಹದೊಳಗೆ ಗುರುವು ಇದಾನ ।

ದೇಶಕ್ಕಧಿಕ-ವಾದ ಮಲಿಯಾಬಾದು ।
ಶರಣ ಶಿಪ್ಪಣ್ಣಯ್ಯನು ಹೇಳ್ಯಾನ ।
ಮೂರು ಲೋಕದ ಅಧಿಕ ತೋರಿಸ್ಯಾನ
ಶ್ರೀ ಗುರು ಹನುಮೇಶನ ನೆನಿತಾನ ॥೬॥

೨

ದೇವನಲ್ಲಾವೇನು । ಸದ್ಗುರು ಮಹಾ ।
ದೇವನಲ್ಲಾವೇನು ॥ಪ॥
ಆದಿಯೊಳು ಸಿದ್ಧರು ಹೋದ ದಾರಿಯ ತೋರಿ
ಭೇದವ ಬಿಡಿಸಿದ ಸಾದು ಮೂರುತಿಗುರು ॥೧॥

ನರಜನ್ಮದಲ್ಲಿ ಬಂದು । ಪ್ರಪಂಚದ ।
ಕಡಲ ಮದ್ಯದಿ ನಿಂದು ॥
ಅರಿತು ಮರೆತು ಒಮ್ಮೆ ಗುರುವೆಂದು ನೆನೆದರೆ
ಗುರುತಿಟ್ಟು ಹೋಗುವ ಸಾದು ಮೂರುತಿ
ಗುರು ॥೨॥

ಆಶೆ-ಪಾಶೆಯ ಬಿಡಿಸಿ । ಮಾಡಿದ ಬಹು ।
ದೋಷ ಕರ್ಮದ ಕೆಡಿಸಿ ॥
ಧ್ಯಾಸದ್ಯಾಸದಿ ಜಪ ಮಾಡೆಂದು ಬೋಧಿಸಿ ।
ಪ್ರಕಾಶ ತೋರಿದ ಈಶ ಮಹೇಶ ಗುರು ॥೩॥

ಭಕ್ತಿ-ಭಾವವ ನೋಡದೆ । ನಂಬಿದವರಿಗೆ ।
ಮುಕ್ತಿಯ ಪಾಲಿಸುವ ॥
ಕರ್ತೃ ಸದ್ಗುರು ಭವತಾರಕ ದೇವನೋಲು
ಪ್ರತ್ಯಕ್ಷನಾದಂಥ ಪರಬ್ರಹ್ಮರೂಪನು ॥೪॥

ಧರೆಯೊಳಧಿಕ-ವಾದ । ಮಲ್ಲಿಗೆ ಹೂ ।
ಮುಡಿದಂಥ ಮಲಿಯಾಬಾಮ ॥
ಅರಿತು-ಮರೆತು ಒಮ್ಮೆ ಶಿಪ್ಪಣ್ಣ ನೆನೆದರೆ
ಹನುಮೇಶರ ನಾಮವು ಇಟ್ಟು ಹೋಗುವನು ।|೫||

೩

ಮಾಡು ಮಾಡು ಗುರುಧ್ಯಾನ ಮಾಡು ।
ಮಾಯ ಮನೆಯೊಳು ಹೊಕ್ಕು ನೋಡು ।|ಪ||
ಪ್ರಭುವು ನುಡಿಯುವ ನುಡಿಯೋಳಾಡಿ ।
ನುಡಿನಡೆಯಂತೆ ನಡೆದು ನೋಡು ।|ಅಪ||

ಕಾಲಕಾಲಕೆ ಯಾವ ಕಾಲಕೆ ।
ಬಂದು ಇಲ್ಲಿಯೇ ಇರ್ಪನು ।
ಒಬ್ಬರಾದರೂ ಮರಳಿ ನೋಡಿ ।
ಮಾಯ ಮನೆಯೋಳು ತಿಳಿಯಿರೋ ।|೧||

ಪೃಥ್ವಿ ಆಪ್ ತೇಜ ವಾಯು ।
ಆಕಾಶ ಈ ತತ್ವವು ।
ಎಣಿಸಿ ಎಣಿಸಿ ಇವುಗಳೊಳಗೆ ।
ಮುಳುಗಿ ಮರುಗಿ ಸಾಯ್ವರೊ ।|೨||

ಮಣ್ಣು ಮಾಯ ದೇಹ ಹುಟ್ಟುವ ।
ಮೂಲ ಶೋಧನ ಮಾಡರು ।
ಮೂರು ಲೋಕ ಹುಟ್ಟುವ ಮೂಲ ।
ಮಂತ್ರ ಬಿಟ್ಟು ನಡಿವರು ।|೩||

ಬರೆದು ಇಟ್ಟ ಮಂತ್ರ ತಂತ್ರ ।
ಶಾಸ್ತ್ರ ಪುರಾಣ ಜಾಡ್ಯರು ।
ಕಂಡ ಮಂದಿಯೊಳಗೆ ನಿಂತು ।
ಕಂಡಿತೆಂದು ಸಾರುವರು ।|೪||

ಹೇಳುವವರಾರು ಕೇಳುವವರಾರು ।
ಮೊದಲ ಗುರುತು ತಿಳಿಯರು ।

ವಾದ ಭೇದವ ನಳಿದು ನೀವು ।
ಏಕ ನಿಷ್ಠೆಲಿ ನಡೆಯಿರೋ ॥೫॥

ಮಾಯ ಮೋಹಕೆ ಸಿಲುಕಿ ನೀವು ।
ಬಡೆದಾಡ ಬಾರದು ।
ಅಕ್ಷತೆ ತೋರುವ ಸರ್ವರೂಪಗಳು ।
ಶಿವನ ರೂಪವೆಂದು ತಿಳಿಯಿರೋ ॥೬॥

ಧರೆಯೊಳ್ಮೆರೆವ ಮಲಿಯಾಬಾದು
ಬ್ರಹ್ಮ ನಿಷ್ಠ ತಿಪ್ಪಣ್ಣನು ।
ಗುರು ಹನುಮೇಶರ ನೆಲೆಯ ತಿಳಿದು ।
ಪಿಡಿದು ನಡೆದು ಕಂಡಾತನು ॥೭॥

೪

ಎಷ್ಟು ಹುಡುಕಿದರೆ ತಂಗಿ
ನಾದವು ಸಿಗದಮ್ಮ ತಂಗಿ ॥ಪ॥
ಎತ್ತೆತ್ತ ಹೋದರೆ ಏನು ಸಿಗದಮ್ಮ
ಕಾಕನ ಪುರದೊಳು ಕಾಕನದೊಳಗೈತಮ್ಮ ॥೧॥

ಜಪತಪ ಬೇಡಮ್ಮ ತಂಗಿ ।
ಮೋದವು ಸಿಗದಮ್ಮ ತಂಗಿ ॥
ಬಸವೆಂಬ ಪುರದೊಳು ಸಾಸಿರಾಗ್ರದಲ್ಲೆಮ್ಮ
ನಡೆನುಡಿ ಮರ್ಮವ ತಿಳಿಯಮ್ಮ ॥೨॥

ಬಾಯ-ಕಿವಿಗಳು ತಂಗಿ ।
ಕಣ್ಣು ಮೂಗವು ತಂಗಿ ॥
ಕೈಯಿಂದ ಕಟ್ಟಿದರೆ ಖಂಡಿತ ಕಾಣದಮ್ಮ ।
ಕಟ್ಟದೆ ಕಡೆಗಾಗಿ ಮಹಿಮೆಯ ಕಾಣಮ್ಮ ॥೩॥

ಈಡ-ಪಿಂಗಳ ತಂಗಿ ।
ಏರಿಸಬೇಡಮ್ಮ ತಂಗಿ ।
ಶ್ವಾಸವ ತ್ರಿಪುಟಿ ಮಾಡಿದರಿಲ್ಲಮ್ಮ ।
ಅಂಗವು ಆಕಾಶಕ್ಕೆ ಏರಿದರಿಲ್ಲಮ್ಮ ॥೪॥

ಕತ್ತಲ ಮನೆಯಮ್ಮ ತಂಗಿ ।
ಜ್ಯೋತಿ ಹಚ್ಚಿ ನೋಡಮ್ಮ ತಂಗಿ ॥
ಮೂರು ಲೋಕದ ಮಾರ್ಗ ಮಾಡಿಕೊಂಡಿರವದಮ್ಮ
ಮನಸಿಟ್ಟು ಮಂಟಪ ಏರಿನೋಡಮ್ಮ ॥೫॥

ಮಂಜಿನ ಬೆಟ್ಟಮ್ಮ ತಂಗಿ ।
ಹತ್ತಲು ಬಾರದಮ್ಮ ತಂಗಿ ॥
ಹತ್ತುವ ಅನುವು ತಿಳಿದು ಪಾಶಭವಯವ ಹರಿದು
ಊರಿಗೆ ಹೋಗಿ ಸೇರಿಕೊಳ್ಳಮ್ಮ ತಂಗಿ ॥೬॥

ದೇಶಕ್ಕಧಿಕವಮ್ಮ ತಂಗಿ ।
ಮಲಿಯಾಬಾದು ಗ್ರಾಮ ತಂಗಿ ।
ಬ್ರಹ್ಮನಿಷ್ಠ ತಿಪ್ಪಣ್ಣ ಹತ್ತಿ ನೋಡ್ಯಾನಮ್ಮ ।
ಶ್ರೀ ಗುರು ಹನುಮೇಶ ಭವಹರಿಸಿದರಮ್ಮ ॥೭॥

೫

ಅಲ್ಲಿ ಇಲ್ಲ ಎಲ್ಲಿ ಇಲ್ಲ ಅಂತೀರಿ ।
ನಿಮ್ಮನ್ನು ನೀವು ಮರತೀರಿ ॥ಪ॥

ಹೇಳಿದ ಮಾತು ಕೇಳಿ ನಡಿತೀರಿ ।
ಬಾಯಿಲೇ ನುಡಿದು ಮಡಿತೀರಿ ॥
ನಿಮ್ಮೊಳಗೆ ನೀವು ತಿಳಿಯಿರಿ ।
ಮೋಕ್ಷದ ಫಲವು ಸವಿಯಿರಿ ॥೧॥

ಓಂ ನಮಃ ಶಿವಾಯ ಅಂತೀರಿ ।
ಮೂಲ ಮಂತ್ರವ ಬಿಟ್ಟು ನಡಿತೀರಿ ॥
ನಮಃ ಶಿವಾಯ ಅಂತೀರಿ ।
ಮರ್ಮವ ತಿಳಿಯದೆ ನಡಿತೀರಿ ॥೨॥

ತತ್ವವು ಎಂದು ಹೇಳುತ್ತೀರಿ ।
ತತ್ವಸಾರ ತಿಳಿಯದೇ ನಡಿತೀರಿ ।
ಶ್ವಾಸವು ಸತ್ಯವೆಂದು ನಂಬಬೇಡ್ರಿ ।
ಅದು ಒಂದು ದಿನ ಸಾಯತೈತ್ರಿ ॥೩॥

ಇದ್ದಾಗ ಮುಕ್ತಿಯ ಪಡಿಬೇಕ್ರಿ ।
ಸತ್ತ ಮೇಲೆ ಅನ್ನುವುದು ಸುಳ್ಳೇ ನೋಡ್ರಿ ।
ಹದಿನಾಲ್ಕು ಲೋಕಂಗಳು ಸುಳಿಬೇಕ್ರಿ ।
ಸತ್ಯಲೋಕದ ಸಾರ ಸವಿಯಬೇಕ್ರಿ ॥೩॥

ಕೂಗುವವನ ಗುರುತು ಹಿಡಿಯಿರಿ ।
ಮೂರು ಲಿಂಗದ ನೆಲೆ ತಿಳಿಬೇಕ್ರಿ ॥
ಅರಿತು ನಿತ್ಯಪೂಜೆಯ ಮಾಡಬೇಕ್ರಿ ।
ಮೋಕ್ಷದ ಫಲವು ಪಡೆಯಬೇಕ್ರಿ ॥೪॥

ಶಿವನೆಂದು ಬಾಯಿಲೇ ಹೇಳುತ್ತೀರಿ ।
ಶಿವನ ಕಾಣದೆ ಮಡಿಶೀರಿ ॥
ನೂರಾ ಎಂಟು ಮಂತ್ರಗಳು ಸುಳ್ಳೇ ನೋಡ್ರಿ ।
ಮೋಕ್ಷದ ಮಾರ್ಗವ ತಿಳಿದು ನೋಡ್ರಿ ॥೫॥

ರಾಜೂರು ಗ್ರಾಮಕ್ಕೆ ಹೋಗಬೇಕ್ರಿ ।
ಗುರು ಹನುಮೇಶರ ಪಾದ ಪಿಡಿಬೇಕ್ರಿ ।
ತಪ್ಪದೇ ಮೋಕ್ಷ ಆಗತೈತ್ರಿ ।
ಇದನ ಸದ್ಭಕ್ತ ತಿಪ್ಪಣ್ಣ ಹೇಳ್ಯಾನ್ರಿ ॥೬॥

೬

ಮನಸಿನ ಭೇದವನು ಅಳಿಯಮ್ಮ ।
ಮಂಕು ಗುಣವ ಬಿಟ್ಟು ನಡಿಯಮ್ಮ ॥ಪ॥
ಭೇದವನಳಿದರೆ ಭವರೋಗ ಹೋದೀತು ॥
ಭೇದದ ಮರ್ಮವ ತಿಳಿಯಮ್ಮಶ ॥ಅಪ॥

ಹತ್ತು ಮಂದಿ ಒಳಗ ಒಂದಾಗ್ಯಾರಮ್ಮ ।
ಅಂದ ಚೆಂದದ ಮನೆ ಕಟ್ಯಾರಮ್ಮ ॥
ಆರೆಂಟು ಜನ ಬಂದು ಹಾರ್ಯಾಡುತಾರಮ್ಮ ।
ಆರಿಗೆ ಅರಿಯದೆ ಕಾಡುತಾರಮ್ಮ ॥೧॥

ಮಾಯದ ಗುಡಿಗೆರಡು ತಿಟಕೆಮ್ಮ ।
ಕಿಲಿಕಿಲಿ ಗಿಳಿಯ ಧ್ವನಿ ಕೇಳಮ್ಮ ॥

ಮನಸಿಟ್ಟು ಮರ್ಮವ ತಿಳಿಯಮ್ಮ ।
ಮಂದ ಮಲೆಯ ಗುಣ ಕಳೆಯಮ್ಮ ||೨||

ಆಗಮ-ನಿಗಮ ಸ್ಥಾನ ತಿಳಿಯಮ್ಮ ।
ಹಾರ್ಯಾಡ್ವರಲ್ಲಿ ಅಗಜ ವಲ್ಲಭರಮ್ಮ ||
ಹಗಲಿರುಳು ಮನಕೊಟ್ಟು ಪೂಜೆ ಮಾಡಮ್ಮ
ಮೋಹ ಮಾಯವ ನೀಗಿ ನಡೆಯಮ್ಮ ||೩||

ಸಾರ ಬಡಗಲ ಗುಡಿ ಹೊಕ್ಕಮ್ಮ
ಸತ್ ಚಿತ್ ಒಂದು ಮಾಡಿ ನಡಿಯಮ್ಮ ||
ಸಾಲಿಟ್ಟು ಸುರಿವ ಅಮೃತ ಸವಿಯಮ್ಮ ।
ಸಕಲ ಶಕ್ತಿಯ ಪಡೆಯಮ್ಮ ||೪||

ಹತ್ತು ಹರದಾರಿ ಆಚೆಗಮ್ಮ ।
ಮಕರಂಧ ಮಲ್ಲಿಗೆ ಹೂ ಚೆಲ್ಯಾರಮ್ಮ ।
ಜ್ಞಾನದ ಬಲದಿಂದ ಹೋಗಮ್ಮ ।
ಮನಸಿಟ್ಟು ಮಕರಂಧ ಸವಿಯಮ್ಮ ||೫||

ಧರೆಯೋಳು ಮೆರೆವ ರಾಜೂರು ಗ್ರಾಮ ।
ಶ್ರೀ ಗುರು ಹನುಮೇಶರ ನೆನಿರಮ್ಮ ||
ಅಜ್ಞಾನದ ಪೊರೆಯನ್ನು ಹರಿವರಮ್ಮ ।
ಘನವಾದ ಸುಖಫಲ ನೀಡುವರಮ್ಮ ||೬||

೭

ಮರಣದ ಬಾಗಿಲು ತಿಳಿಯಮ್ಮ ।
ಭವರೋಗದ ಭಾಗ್ಯವನಳಿಯಮ್ಮ ||ಪ||

ಅಂದ ಚೆಂದದ ಮನೆಯಮ್ಮ ।
ಪರಬ್ರಹ್ಮನು ಮಾಡಿದ ಬೀಡಮ್ಮ ||
ಮನೆಯೋಳಿರ್ಪ ದೇವರ ಕಾಣಮ್ಮ ||
ಮರಣವ ಬಾಗಿಲು ಮುರಿಯಮ್ಮ ||೧||

ಶಾಸ್ತ್ರ ಪುರಾಣ ಓದಮ್ಮ ।
ಮುರಿದು ಮೂಲೆಗೆ ಅವುಗಳ ನೀಡಮ್ಮ ॥
ಸತ್ಯದ ನುಡಿಯ ತಿಳಿಯಮ್ಮ ।
ಮೋಕ್ಷದ ಪಥವು ಹಿಡಿಯಮ್ಮ ॥೨॥

ಹೇಳಿದ ವಾಕ್ಯವು ಹುಸಿಯಮ್ಮ ।
ಕೇಳಿದ ಶ್ರಾವಣ ಅಲ್ಲಮ್ಮ ॥
ಅಂಗದೊಳಿರ್ಪ ಲಿಂಗವ ಕಾಣಮ್ಮ ।
ಮೋಕ್ಷದ ಸಾಧನ ಮಾಡಮ್ಮ ॥೩॥

ಇಪ್ಪತ್ತೂರು ಲಿಂಗಮ್ಮ
ಮೂರೇ ಲಿಂಗವು ನಿಜವಮ್ಮ ।
ನಾಸಿಕ ಮಧ್ಯ ಅಂತ್ಯದಲ್ಲಿರುವಮ್ಮ ॥
ಸತ್ಯದ ಲಿಂಗವ ತಿಳಿಯಮ್ಮ ॥೪॥

ಮುಟ್ಟದ ಹೂವ ನೀಡಮ್ಮ ।
ತೊಯದ ಉದಕವ ಸುರಿಯಮ್ಮ ॥
ಹರಿಯದ ಮಡಿಯನು ಉಟ್ಟುಕೊಳ್ಳಮ್ಮ ।
ನಿತ್ಯದ ಕರ್ಮವ ನಡಿಸಮ್ಮ ॥೫॥

ದಶ ಇಂದ್ರಿಯಗೆ ಸಿಗದಮ್ಮ ।
ಸತ್ಯದ ಮಾತಿದು ನೋಡಮ್ಮ ॥
ಮಾಯದೇಹ ರಹಿತವಾದಮ್ಮ ।
ಷಂಡಗ ಸಾಧ್ಯವು ಐತೆಮ್ಮ ॥೬॥

ಅಂತರ್ಲಕ್ಷವು ಸತ್ಯಮ್ಮ ।
ಬಹಿರ್ಲಕ್ಷವು ಮಿಥ್ಯಮ್ಮ ॥
ಆರು ಮೂರು ಒಂಭತ್ತು ಹತ್ತಮ್ಮ ।
ಅಳಿದು ಆನಂದ ಪಡಿಯಮ್ಮ ॥೭॥

ಏಕಾದಶಿ ತಿಳಿಯಮ್ಮ
ಮಲ್ಲಿಗೆ ಮಕರಂಧ ಸವಿಯಮ್ಮ ॥
ದ್ವಾದಶ ದ್ವಾರವ ತೂರಮ್ಮ ।
ಪರಿಪೂರ್ಣ ಬ್ರಹ್ಮವು ತಾನಮ್ಮ ॥೮॥

ಧರೆಯೊಳು ಮೆರೆವ ರಾಜೂರು ಗ್ರಾಮ ।
ವಾಸಶ್ರೀ ಗುರು ಹನುಮೇಶರಮ್ಮ ।
ಮನವ ಬಾಗಿ ಪಾದವ ಪಿಡಿಯಮ್ಮ ।
ಮೋಕ್ಷ - ಪದವಿಯ ಪಡೆಯಮ್ಮ ॥೯॥

೮

ಅಂಬಿಗ । ಅಂಬಿಗ। ಅಂಬಿಗ ।
ಎಲ್ಲಾ ದೇಹದೊಳಗೆ ಐದಾನಂಬಿಗ ॥ಪ॥

ಏಳು ಕೋಟೆಯೊಳಗಿರುವನಂಬಿಗ ।
ಸಪ್ತ ನದಿಯೊಳಗೈದಾನಂಬಿಗ ॥
ನೀರಿಲ್ಲದ ಹೊಳೆಯಾಗ ಅಂಬಿಗ ।
ಒಂದು ಹರಿಗೋಲ ಹಾಕ್ಯಾನಂಬಿಗ ॥೧॥

ಬಿರುಗಾಳಿ ಬೀಸಿತ್ತು ಅಂಬಿಗ ।
ಅಲ್ಲಿ ಹುಟ್ಟುಗಾರನೊಬ್ಬ ಸತ್ತನಂಬಿಗ ।
ಹರಿಗೋಲು ಮುಳುಗಿತು ಅಂಬಿಗ ।
ಮೂರು ಝುಂಡಾ ಹಾರಿ ಹೋಗ್ಯಾವಂಬಿಗ ॥೨॥

ನೂರಾ ಎಂಟು ಜನರು ಅಂಬಿಗ ।
ಅವರು ಪತ್ತೆಯಿಲ್ದೆ ಸತ್ತು ಹೋಗ್ಯಾರಂಬಿಗ ।
ಜನರು ಸತ್ತು ಪ್ರಾಣ ಹೋಗ್ಯಾದಂಬಿಗ ।
ಪ್ರಾಣ ಹೋಗಿ ಜೀವ ಉಳಿದಾದಂಬಿಗ ॥೩॥

ಮೇಲಗಿರಿಯ ಬೆಟ್ಟದ ಮೇಲೆ ಅಂಬಿಗ ।
ಅಲ್ಲಿ ಹತ್ತು ವರ್ಣದ ಝುಂಡಾಪಿದೆ ಅಂಬಿಗ ।
ಹನ್ನೊಂದುಳಿದು ಆನಂದಾಗ್ಯಾನಂಬಿಗ ।
ಅಲ್ಲಿ ಹನ್ನೆರಡಳಿದು ಹೋಗಿ ಹೊಂದ್ಯಾನಂಬಿಗ ॥೪॥

ಆತ್ಮದ ಅಂತ್ಯಕ್ಕಿಳಿದಾ ನಂಬಿಗ ।
ಅಲ್ಲಿ ಸತ್ತು ಹುಟ್ಟದಂಗ ಆಗ್ಯಾ ನಂಬಿಗ ।
ಬಲ್ಲ ಜ್ಞಾನಿಗೆ ಗೊತ್ತು ಅಂಬಿಗ ।
ಇದ್ನ ಯೋಗಬಲ್ಲವರು ಹೇಳ್ಯಾರಂಬಿಗ ॥೫॥

ವಾಸುಳ್ಳ ಮಲಿಯಾಬಾದು ಅಂಬಿಗ ।
ಶರಣ ತಿಪ್ಪಣ್ಣ ಹೇಳ್ಯಾನಂಬಿಗ ॥
ವಸುಧಿ ರಾಜೂರು ವಾಸ ನಂಬಿಗ ।
ಶ್ರೀ ಗುರು ಹನುಮೇಶ ಬಲ್ಲ ನಂಬಿಗ ॥೬॥

೯

ಕೇಳೊ ಕೇಳೋ ಕೇಳೀರಣ್ಣಾ ।
ಬಂಡಿಗೆ ನಾಲ್ಕು ಗಾಲಿಗಳಣ್ಣಾ ॥ಪ॥
ನಾಲ್ಕು ಗಾಲಿನ ಬಂಡಿಯದ್ದು ।
ತ್ರೈಲೋಕ ಹೊತ್ತು ನಿಂತಾದಣ್ಣಾ ॥ಅ.ಪ॥

ಬಂಡಿಯೊಳಗೆ ಆನೆ ಬಂದ್ಯೆತಣ್ಣಾ ।
ಬಲ್ಲ ಜ್ಞಾನಿಗೆ ಅದು ಒಲಿದಾದಣ್ಣಾ ॥
ಆತ್ಮದ ವಿಚಾರ ಬಲ್ಲವರಣ್ಣಾ ।

ಆನೆಯ ಮರಿಯೊಂದು ಐತೆ ನೋಡಣ್ಣಾ
ಕಾಡಿನೊಳಗೆ ಅದು ತಳೆದಾದಣ್ಣಾ ॥
ಮರಿಯನು ಹುಡುಕಲು ಹೋದವರಣ್ಣಾ
ಹುಡುಕ್ಹುಡುಕಿ ದಣಿದು ಮಡಿದಾರಣ್ಣಾ ॥೨॥

ಕಾಡಿಗೆ ಮೂರು ಹಾದಿಗಳಣ್ಣಾ ।
ಹಾದಿಯೊಳಗೆ ಐದು ಬಾವಿಗಳಣ್ಣಾ ॥
ಬಂಡಿಗೆ ಎರಡು ಎತ್ತುಗಳಣ್ಣಾ ।
ಜತ್ತಿಗೆ ಬಿಗಿದು ಕಟ್ಟ್ಯಾರಣ್ಣಾ ॥೩॥

ಬಂಡಿಯಲ್ಲಿ ಕುಳಿತು ಹೋದೇವಣ್ಣಾ ।
ಖಾನಾಪುರವೆಂಬ ಊರಿಗಣ್ಣಾ ॥
ಊರೆಲ್ಲಾ ತಿರುಗಾಡಿ ನೋಡಿದೇವಣ್ಣಾ ।
ಕಳೆದಂಥ ಮರಿಯು ಸಿಗಲಿಲ್ಲವಣ್ಣಾ ॥೪॥

ಖಾನಾಪುರದಿಂದ ಎಂಟು ಗಾವುದವಣ್ಣಾ ।
ಅಲ್ಲಿ ಹರಿವವು ನದಿಗಳೆರಡಣ್ಣಾ ॥
ನದಿಯಲ್ಲಿ ಮುಳುಗಿ ನೋಡಿದೆವಣ್ಣಾ ॥

ಕಳದ್ಹೋದ ಮರಿಯು
ದೊರೆಯಲಿಲ್ಲಣ್ಣ ॥೫॥

ನದಿಯ ಬದಿಯಲ್ಲಿ ತದಳಿಯ ಬಸವಣ್ಣ ।
ಇರುವುದು ಕಂಡು ಹೋದೆವಣ್ಣ ॥
ವನದೊಳು ಸುಳಿದು ನೋಡಿದೆವಣ್ಣ ।
ಮರೆಯಾದ ಮರಿಯು ಕಾಣಲಿಲ್ಲಣ್ಣ ॥೬॥

ನಂದಿಯಿಂದ ಮುಂದೆ ಮೂರು ಗಾವುದಣ್ಣ ।
ಅಲ್ಲಿ ಇರುವುದು ಖನಿಜ ಬೆಟ್ಟಣ್ಣ ॥
ಬೆಟ್ಟೆಲ್ಲಾ ಶೋಧನ ಮಾಡಿದೆವಣ್ಣ ।
ಕಂಡಂಥ ಮರಿಯು ಸಿಗದ್ಹೋಯಿತಣ್ಣ ॥೭॥

ಖನಿಜ ಬೆಟ್ಟದಿಂದ ಹತ್ತು ಗಾವುದಣ್ಣ ।
ನವಣೆಯ ಹೊಲವೊಂದು ಬೆಳೆದೈತಣ್ಣ ।
ಸಾಲು ಸಾಲವ ಹಿಡಿದು ನೋಡಿದೆವಣ್ಣ ।
ಎತ್ತ ನೋಡಲು ಮರಿಯ ಸುಳುವಿಲ್ಲವಣ್ಣ ॥೮॥

ಹೊಲದಂಡೆ ಆಚೆಗೆ ಒಬ್ಬನಿದ್ದಾನಣ್ಣ ।
ಅಲ್ಲಿತ್ತು ಒಂದು ಬಂಡಿದಾರ್ಯಣ್ಣ ॥
ಮರಿಹೋದ ದಾರಿಗೆ ತಳುಹುವ ಜಾಣ ।
ಕಳೆದಂಥ ಮರಿಯನು ಹಿಡಿದು
ಕೊಟ್ಟಾನಣ್ಣ ॥೯॥

ಅಲ್ಲಿದ್ದ ಮರಿಯು ತಾಯಾಗಿತ್ತಣ್ಣ ।
ಅಲ್ಲಿದ್ದ ತಾಯಿಯು ಮರಿಯಾಯಿತಣ್ಣ ॥
ಆತ್ಮದ ಅಂತ್ಯವ ಬಲ್ಲವರಣ್ಣ ।
ಮರಿ ತೋರಿಸಿದ ಮಹಾತ್ಮಾನಾರಣ್ಣ ॥೧೦॥

ವಾಸುಳ್ಳ ಮಲಿಯಾಬಾದು ತಿಪ್ಪಣ್ಣ ।
ಪ್ರಭುವಿನ ಪಾದಕ್ಕೆ ಎರಿಗ್ಯಾನಣ್ಣ ॥
ಮರಿಯಡಗಿದ ಸ್ಥಾನ ತಂಡಾನಣ್ಣ ।
ಗುರುಹನುಮೇಶರ ತರುಣದಿಂದಣ್ಣ ॥೧೧॥

೧೦

ಅಯ್ಯಾ ಅಯ್ಯಾ ಕೇಳಯ್ಯಾ ।
ಬೋಧಾಗಲಾರದವರಾರಯ್ಯ ॥ಪ॥
ಸರ್ವಜೀವಿರಾಶಿಗಳಿಗೆ ।
ಬೋಧಾಗ್ಯಾದ ನೋಡಯ್ಯ ॥ಅ.ಪ॥

ಬೋಧ ಅಂದರೆ ಏನಯ್ಯ ।
ಅದು ಯಾವ ಜಗದಲಿ ಐತೆಯ್ಯ ।
ನಿಜಬೋಧವೆಂದರೆ ಏನಯ್ಯ ।
ಅದು ಯಾವ ರೂಪದಲ್ಲಿ ಐತೆಯ್ಯ ॥೧॥

ಅಂಡ-ಪಿಂಡದೊಳಗಯ್ಯ ।
ಬ್ರಹ್ಮಾಂಡವೆಲ್ಲಾ ತುಂಬ್ಯಾದಯ್ಯ ।
ಅಖಂಡದೊಳಗಿನ ಆನಂದವು ।
ಮಂಡಲದೊಳಗೆ ಸಿಲುಕ್ಯಾದಯ್ಯ ॥೨॥

ತಾಯಿಗರ್ಭದೊಳಗಯ್ಯ ।
ಮೂರಾರು ಮಾಸದೊಳಗಯ್ಯ ।
ನಿತ್ಯ ನಿರ್ಗುಣ ನಿರ್ಮಲ ಗುರುರಾಯ ।
ನಿಜಬೋಧ ಮಾಡಿದ್ದಿಲ್ಲೇನಯ್ಯ ॥೩॥

ಕರ್ಣಕುಂಡಲದೊಳಗಯ್ಯ ।
ಪರಬ್ರಹ್ಮನಾದವ ತಿಳಿಯಯ್ಯ ।
ನಾಲ್ಕು ಯುಗದೋಳು ಅಡಗಿರುವ ।
ದೇವರ ವಾಕ್ಯವು ಕೇಳಯ್ಯಾ ॥೪॥

ಮುತ್ತಿಯ ಮೂಲ ಮಂತ್ರಯ್ಯ !
ಮೂರು ಲೋಕವೆಲ್ಲ ತುಂಬ್ಯಾದಯ್ಯ ।
ಸತ್-ಚಿತ್ ಒಂದು ಮಾಡಯ್ಯ ।
ನಿಷ್ಠ ಲೆ ನಿಜಬ್ರಹ್ಮವ ನೋಡಯ್ಯ ॥೫॥

ಮೂರು ಪ್ರಿಯಸೋಳಾಡಯ್ಯ ।
ನಾಸಿಕಾಗ್ರದಲ್ಲಿ ನೋಡಯ್ಯ ॥

ಗಂಗೆ ಯಮುನೆ ಸರಸ್ವತಿಯಲ್ಲಿ ।
ಮಿಂದು ಶಾಂಭವಿನೊಲಿಸಯ್ಯ ॥೬॥

ಕುಲಗುರು ಬೋಧವ ಪಡೆಯಯ್ಯ ।
ಕೂನವಳಿದು ನಡೆಯಯ್ಯ ॥
ನಿತ್ಯ ಇಹದ ಜ್ಞಾನವ ಪೇಳುವ ।
ಬುದ್ಧಿ ಗುರುವಿನೋಳಾಡಯ್ಯ ॥೭॥

ಕುಲಬುದ್ಧಿಗುರು ಒಡನಾಡಯ್ಯ ।
ಕೈಲಾಸದ ಹಾದಿಯ ಹಿಡಿಯಯ್ಯ ।
ಅಷ್ಟವಿಧ ಸಿದ್ಧಿಯ ಪಡೆಯುವ ।
ವಿದ್ಯೆ ಗುರು ವಿನೋಳಾಡಯ್ಯ ॥೮॥

ಆರು ರಂಜನ ಕಳೆಯಯ್ಯಾ ।
ಮೂರಾರು ತತ್ವವ ಅಳಿಯಯ್ಯಾ ॥
ಸಕಲ ಬಿದ್ರೂಪವನಳಿಯಯ್ಯ ।
ಸ್ವಯಂ ಜ್ಯೋತಿಯೊಳು ಬೆಳಗಯ್ಯ ॥೯॥

ಇಷ್ಟಭಾವ ಲಿಂಗಯ್ಯ ।
ಪ್ರಾಣಲಿಂಗದೋಳು ಬೆರೆಯಯ್ಯ ॥
ಸ್ಥೂಲಸೂಕ್ಷ್ಮ ಕಾರಣ ಕಳೆಯಯ್ಯ ।
ಪವಾಡ ಶಕ್ತಿಯ ಪಡೆಯಯ್ಯ ॥೧೦॥

ಮೇಲು ಮಂಟಪ ನೋಡಯ್ಯ ।
ಮಹಾಶಕ್ತಿ ನೆಲೆಯ ತಿಳಿಯಯ್ಯ ॥
ಕೂಗುವ ಧ್ವನಿಕೇಳಿ ಗದ್ದಲ ಬೀಳದೆ,
ಸಿದ್ಧನಾಗಿ ನೀ ನಡೆಯಯ್ಯಾ ॥೧೧॥

ನಾಲ್ಕು ಆಕಾಶ ಮೇಲಯ್ಯ ।
ಜ್ಞಾನ ಗುರುವಿನೋಳಾಡಯ್ಯ ।
ಸರ್ವ ಮದಗಳ ಶಕ್ತಿಯ ಕುದಿಸಯ್ಯ ।
ಸದ್ಗುರು ಕರುಣೆಯ ಪಡೆಯಯ್ಯ ॥೧೨॥

ಶೃಷ್ಠಿಯೋಳು ಜಹಿರಾಬಾದು ನೋಡಯ್ಯ ।
ಬ್ರಹ್ಮನಿಷ್ಠೆ ತಿಪ್ಪಣ್ಣ ಹೇಳ್ಯಾನಯ್ಯ ।
ಶ್ರೀ ಗುರು ಹನುಮೇಶರ ನೆನಿರಯ್ಯ ।
ಭವರೋಗವ ಕಳೆಯುವರಯ್ಯ ||೧೩||

## ೧೧

ಶೋಭಾನವೆನ್ನಿರೆ । ಶೋಭಾನವೆನ್ನಿರೆ ।
ಶೋಭಾನವೆನ್ನಿ ಶಿವನನ್ನೇ ಶೋಭಾನವೆ ||ಪ||

ಹನ್ನೆರಡು ವರುಷದ । ಕನ್ನೆ ನಾ ನಿದ್ದೇ ನಮ್ಮ ।
ಯನ್ನ ಬೇಡುತ ಬಂದಾರಮ್ಮ ಶೋಭಾನವೆ ||೧||

ಶರಣರೆಲ್ಲರು ಕೂಡಿಯನ್ನಯ ವರನೋಡಿ ।
ಯನ್ನಗೆ ನಿಶ್ಚಯ ಮಾಡಿದರಮ್ಮ ಶೋಭಾನವೆ ||೨||

ಮರವಿನ ಮನೆಯಲ್ಲಿ ಅರುವಿನ ಹಂದರನಾಡಿ
ಯನ್ನಯ ಲಗ್ನ ಮಾಡಿದರಮ್ಮ
ಶೋಭಾನವೆ ||೩||

ಗಂಡ-ಹೆಂಡಿರು ಕೂಡಿ ಬಾಳೇವು ಮಾಡಿದೇವಮ್ಮ ।
ಗಂಡನ ಸುಖವ ಕಾಣೇನಮ್ಮ ಶೋಭಾನವೆ ||೪||

ಪಡುವಣದ ಕೋಣೇಲಿ ಎಡಮೂರಿ ಸೊಂಕ
ಧ್ವನಿಯ।
ವಡಬರಿಸಿ ನಾನು ತಿಳಿದೇ ನಮ್ಮ ಶೋಭಾನವೇ
||೫||

ಅರಮನೆ ಅಂಗಳಕ್ಹಾಸಿ ತಿರುಗುತ ಬಂದೇ ನಮ್ಮ ।
ಗಂಡನು ಯನಗೆ ದೊರೆಯಲಿಲ್ಲ ಶೋಭಾನವೇ ||೬||

ಕತ್ತಲ ಮನೆಯೊಳು ದೀಪ ಹಚ್ಚಿದೇನಮ್ಮ ।
ಎತ್ತ ಹುಡುಕಿದರೆ ಸಿಗನಮ್ಮ ಶೋಭಾನವೇ ||೭||

ಮಾಳಿಗೆ ಮನೆಯೊಳು ಏರಿನೋಡಿದೇ ನಮ್ಮಾ ।
ಗಂಡನ ಮಹಿಮೆ ತಂಡೇ ನಮ್ಮಾ ಶೋಭಾನವೇ ॥೮॥

ಹತ್ತರೊಳು ಒಂದಾದ ಸುಖವ ಮತ್ತೇನು ಹೇಳಮ್ಮಾ ।
ಬೆತ್ತದೊಳಗೆ ಕೂಡಿದನಮ್ಮಾ ಶೋಭಾನವೇ ॥೯॥

ಶೃಷ್ಟಿಯೊಳು ರಾಜೂರು ಶ್ರೀಗುರು ಹನುಮೇಶ ।
ತೋರಿದ ಮಹಿಮೆ ಕಂಡೇನಮ್ಮಾ ಶೋಭಾನವೇ ॥೧೦॥

# ಯರಮಾರೆಪ್ಪನ ತತ್ವಪದಗಳು

೧

ತಿಳಿದು ನೋಡಲೋ ನಿನ್ನೊಳಗೆ ನೀನು । ತಿಳಿದು ನೋಡಲೊ
ತಿಳಿದು ನೋಡು ನಿನ್ನ ಒಳಗೆ ನುಡಿಯುತಿರುವ ನಾಮವನ್ನು
ಮೋದದಿಂದ ಕೂಗುತಿರುವ ನಾದವನ್ನು ಕೇಳು ನೀನು ||ಪ||

ಕಣ್ಣು ಮುಚ್ಚಲು ನಿನ್ನೊಳಗ ನೀನು ದೃಷ್ಟಿ ನೆಟ್ಟಲು
ಕಣ್ಣು ಮುಚ್ಚಿ ನೋಡು ನಿನ್ನ ದೃಷ್ಟಿಯೋಳು ಕಾಣುತಿರುವ
ನಾದಬಿಂದು ಕಳಾತೀತ ಯೋಗವನ್ನು ಮಾಡು
ನೀನು ||೧||

ಏಳು ನೆಲೆಗಳು ಅಲ್ಲಿರುವ ಸ್ಥಾನ ಏರಿ ನೋಡಲೊ
ಏಳು ನೆಲೆಗಳೇರಿ ನೋಡು ಇರುವ ಸ್ಥಾನ ತಿಳಿದು ನೋಡು
ಸ್ಥಾನವಿಲ್ಲದೆ ಕಾಣುತಿರುವ ಬೆಳಕಿನೊಳು ಆಡು ನೀನು ||೨||

ಜಹಿರಾಬಾದದೊಳಗ ಅನುಭವ ಮಂಟಪದೊಳಗ
ರಾಯಚೂರ ಊರಿನೊಳಗ ತತ್ವಸಾರುತಿರುವಂತಾ
ಶಿವಯೋಗಿ ತಿಪ್ಪಣ್ಣಯ್ಯನ ನಾಮವ ನುಡಿ ನೀನು ||೩||

೨

ನಿಜನುಡಿ ಶ್ರೀಗುರು ಮಂತ್ರವನು
ನಿಜನುಡಿಯದೆ ತಿಳಿಯದು ಜ್ಞಾನವಿದು ।
ಮೂಜದ ಮೊದಲಕ್ಷರವಿದು
ನಿಜ ತೇಜಸದಲಿ ನಿತ್ಯ ಜಪಿಸುವದು ||೧||

ಸಾಧನ ಎರಡಕ್ಷರವಿದು ನಿತ್ಯ
ಸಾಧಿಸಿದವರಿಗೆ ಸಾಧ್ಯವಿದು ।
ಬರಿದ ಮೂರಕ್ಷರವಿದು ಕೇಳು
ನಿಜ ಭಜಿಸಿದವರಿಗೆ ಭಾಗ್ಯವಿದು ॥೨॥

ನಾದದ ನಾಲ್ಕಕ್ಷರವಿದು
ನಿಜ ನಾಭಿಕಮಲದಲಿ ತೋರುವದು ।
ಆಸನದಾ ಐದಕ್ಷರವಿದು
ನಿಜ ಅರಿದವರಿಗೆ ಆನಂದವಿದು ॥೩॥

ಧರೆಯೊಳು ರಾಯಚೂರ ಗ್ರಾಮವಿದು
ನಿಜ ಜಹಿರಾಬಾದಿನಲಿ ತೋರುವದು ।
ಶಿವಯೋಗಿ ತಿಪ್ಪಣ್ಣಯ್ಯನ ಸಾರವಿದು
ನಿಜಗುರು ಹನುಮೇಶನೊಳಡಗಿಹದು ॥೪॥

೩

ಹೀನ ಜನರಿಗೆ ತಿಳಿಯದೀ ಮಾತು । ಸುಜ್ಞಾನದ ಗುರುತು
ಹೀನ ಜನರಿಗೇನು ತಿಳಿಯಿತು । ಕಾನನದೊಳಗಿದ್ದ ಮಾತು ॥ಪ॥

ಸ್ವಾನನಂತೆ ಮನೆಮನೆ ತಿರುಗಿದ
ಮಾನಗೇಡಿಗಿದೇನು ಗೊತ್ತು ।
ಧರಣಿಯಿಲ್ಲದೆ ಮರಹುಟ್ಟಿತ್ತು ಆ
ಮರದ ಮ್ಯಾಲ ಮೂರುಕಾಲಿನ ಪಕ್ಷಿ ಕುಂತಿತ್ತು ॥೧॥

ಕಣ್ಣು ಇಲ್ಲದೆ ನೋಡುತಿತ್ತು
ರೆಕ್ಕೆಯಿಲ್ಲದೆ ಹಾರುತಿತ್ತು ।
ಕೈಯಿಲ್ಲದವನ ಹೇಟೆಗೆ
ಕತ್ತರಿಸಿ ಭೂಮಿಗೆ ಬಿತ್ತು ॥೨॥

ಒಳಗೆ ಹೊರಗೆ ತುಂಬುತಿತ್ತು
ಕೆಳಗೆ ಮ್ಯಾಲೆ ಏರುತಿತ್ತು ।
ಸ್ವಾನವಿಲ್ಲದೆ ಮನೆಯ ಹೊಕ್ಕಿತ್ತು
ಮನಮೋಹದಿಂದ ಕೂಡಿ ಒಂದೇಯಾಗಿತ್ತು ॥೩॥

ಕೆಳಗೆ ಮ್ಯಾಲೆ ಏರುತಿತ್ತು
ಮಳೆಯಬಾದಿಗಂಜಿ ಬಂತು ।
ರಾಯಚೂರಿನ ಹೆಸರಾಯಿತು
ಜಹಿರಾಬಾದಿಗೆ ಸೇರಿಕೊಂಡಿತು ॥೪॥

ಕಾಲುಇಲ್ಲದೆ ನಡೆದು ಬಂತು
ನಾಲಿಗಿಲ್ಲದೆ ನುಡಿಯುತಿತ್ತು ।
ಯೋಗಿ ತಿಪ್ಪಣ್ಣಯ್ಯಗೆ ಗೊತ್ತು
ತ್ಯಾಗಿ ಹನುಮೇಶನಿಗೆ ಕಂಡಿತು ॥೫॥

೪

ನಾರಿ ಹೋಗೂನು ರಾಯಚೂರಿಗೀಗ
ಜಹಿರಾಬಾದಿಗೆ ಹೋಗೂನು ಬೇಗ ।
ಸತ್ಯ ಶರಣರೆಲ್ಲರೂ ಒಡನೆ ಕೂಡಿ
ಮಠವ ಕಟ್ಯಾರ ದಿಟವೊಂದೆ ಮಾಡಿ ॥ಪ॥

ಐದು ವರ್ಣದ ಕುಪ್ಪಸಃ ತೊಟ್ಟು
ಆರು ವರ್ಣದ ಸೀರೆಯಃನುಟ್ಟು ।
ಹಣೆಯ ಮ್ಯಾಲೊಂದು ಕುಂಕುಮದ ಬೊಟ್ಟು
ರನ್ನದಃ ಮೂಗುತಿ ಮೂಗಿನೊಳು ಇಟ್ಟು ॥೧॥

ಸುತ್ತಮುತ್ತ ಹಳ್ಳಿಗಳಿಂದ
ಬಂದು ನಿಂತಾರೆ ಸಂದಿಲ್ಲದಂಗ ।
ಪರಿಪರಿ ತತ್ವಗಳ ತಿಳಿವಿನಿಂದ
ಭಜನಿ ಹಾಡುವರು ಏನು ಚಂದ ॥೨॥

ನಾಲ್ಕು ಕಂಬದ ಮಂಟಪದಲ್ಲಿ
ಅಷ್ಟಮಧ್ಯದಳ ಕಮಲದಲ್ಲಿ ।
ವಾದದ ಭೇದವ ತಿಳಿಯುವಲ್ಲಿ
ಸತ್ಯ ಶರಣರು ನಿಂತಿರುವರಲ್ಲಿ ॥೩॥

ಧರಣೆಯೊಳಗೆ ರಾಯಚೂರದಲ್ಲಿ
ಶರಣ ತಿಪ್ಪಣ್ಣನಿರುವನಲ್ಲಿ ।

ಕರುಣ ಪಡೆಯಿರಿ ಹನುಮೇಶನಲ್ಲಿ
ಮುಕ್ತಿ ಯಾಗುವುದು ನಿಮಗಿಲ್ಲಿ ||೪||

೫

ಹೀನಮಾನವನಾದೆನೊ ಈ ಜಗದೊಳು
ಹೀನಮಾನವನಾದೆ ಗ್ನಾನವ ತಿಳಿಯದೆ
ಸ್ವಾಮಿ ನಿಮ್ಮನು ನಾವ ಮನದೊಳು ನೆನೆಯದೆ ||ಪ||

ಹತ್ತಿಯ ಹೊಲದಾಗ ಎತ್ತು ಸತ್ತಾದ ಒಂದು
ಸತ್ಕ ಕತ್ತಿಯ ಹಿಡಿದು ಚರ್ಮವ ಸುಲಿ ತಂದು
ಸುಲಿದ ಚರ್ಮಕೆ ನಾನು ಸುಣ್ಣವ ಧರಿಸಿದೆನು ||೧||

ತನುವೆಂಬೊ ಭಾಂಡದೊಳು ಮನವೆಂಬೊ ನೀರು ತುಂಬಿ
ಘನವೆಂಬೊ ಅಡವಿಗ್ಹೋಗಿ ಅವರೆಚಕ್ಕೆಯ ತಂದು
ಸುಣ್ಣದ ತೊಗಲನ್ನು ಬಣ್ಣ ಮಾಡಿದೆ ನಾನು ||೨||

ಬಣ್ಣ ಮಾಡಿದ ತೊಗಲು ಬಯಲಿಗೆ ನೆನೆಯಿಟ್ಟು
ಕುಟ್ಟಿಕುಟ್ಟಿ ಹದಮಾಡಿ ಹೊಲಿದೆ ನಿಮ್ಮ ಮೆಟ್ಟು
ಯೋಗಿ ತಿಪ್ಪಯ್ಯಗೆಗೊತ್ತು ಏರಿದ ಏಳುಮೆಟ್ಟು ||೩||

ರಾಯಚೂರ ಪುರವಾಸ ದ್ವಾರನವರಂಗಧೀಶ
ಶ್ರೀ ಗುರು ಹನುಮೇಶ ನೆನೆದರೆ ಭವನಾಶ
ಜಹಿರಾಬಾದಲಿ ನೋಡು ಕುಂತಾನ ಜಗದೀಶ ||೪||

೬

ನಿನ್ನ ನಂಬಿ ನಾನು ಬಂದೇನೊ । ಶ್ರೀ ಗುರುದೇವ
ನಿನ್ನ ನಂಬಿ ನಾನು ಬಂದೇನೊ ||ಪ||

ನಿನ್ನ ನಂಬಿ ನಾನು ಬಂದೆ
ಕರವ ಮುಗಿದು ಬೇಡಿಕೊಂಡೆ ।
ಶಿರವ ಬಾಗುವೆ ನಿನ್ನ ಮುಂದೆ
ಕರುಣಿಸಯ್ಯಾ ಎನ್ನ ತಂದೆ ||೧||

ಮೂರು ಮಲಂಗಳ ತೊಳೆಯೆಂದ
ಮೂರೈದುಮದಂಗಳ ನಷ್ಟ ಮಾಡೆಂದ ।
ಅಷ್ಟ ಸುಟ್ಟು ನಷ್ಟ ಮಾಡಿ ಏಳು ವ್ಯಸನ ಹಸನಾ ಮಾಡಿ
ಆರು ಮಂದಿ ವೈರಿಕೊಂದು ಧೀರನಾಗಿ ನಡೆಯೋ ಮುಂದ ॥೨॥

ಕರವ ಪಿಡಿದು ಕರಿಸಿದಾ ಮುಂದ
ಕಣ್ಣು ಮುಚ್ಚಿ ನಿಂದು ನೋಡೆಂದ ।
ಕಣ್ಣು ಮುಚ್ಚಿನಿಂದು ನೋಡಿ ಪೀಡ ಪಿಂಗಳೆಂಬ ಎರಡು
ತೋರುವ ಉನ್ಮಾನಿಯೊಳು ಸೇರಿಕೊಂಡು
ಮುಕ್ತನಾಗೆಂದ ॥೩॥

ರಾಯಚೂರಲ್ಲಿ ಹುಟ್ಟಿ ಬಂದೇನೊ
ನರಜನ್ಮವೆತ್ತಿ ಜಹಿರಾಬಾದಿಯಲ್ಲಿ ಕಂಡೇನೊ ।
ಜಹಿರಾಬಾದಿಯಲ್ಲಿ ಕಂಡೆ ತಿಪ್ಪಣ್ಣಯ್ಯನ ನಾಮದಿಂದೆ
ಸದ್ಗುರು ಹನುಮೇಶ ಪಾದ ಗಟ್ಟಿಯಾಗಿ ಹಿಡಿದುಕೊಂಡೇನೊ ॥೪॥

೭

ಆನಂದದಿ ಬಂದನು ಗುರುಚಂದಾಸ್ವಾಮಿಯ ನೋಡೆಂದನು
ಆನಂದದಿ ಬಂದ ಪರಿಪರಿ ವಿಧದಿಂದ ।
ಮುಕುಂದ ಮುರಹರಿ ಗದ್ದೆ ಖಾದರಲಿಂಗ ॥ಪ॥

ಆಧಾರಮಾಡಂದನು ಅತಿ ಮೋಹದಿಂದ ಸಂಗಾತಿ
ಕೂಡಂದನು
ಆಧಾರ ಮಾಡೆಂದ ಅರು ಹರಿಯದಂಗ ।
ಸಂಧುನಾ ತಿಳಿಯೆಂದ ಚಂದಾವ ನೋಡೆಂದಾನೊ ॥೧॥

ಒಂಭತ್ತು ತಿಂಗಳಲ್ಲಿ ಹೊಟ್ಟೆಯೊಳು ಹುಟ್ಟಿ ಮುಟ್ಟಿನಲ್ಲಿ
ಪೀಡ ಪಿಂಗಳೆಂಬ ನಡು ಮಧ್ಯದಲ್ಲಿ ।
ನಡುಮಧ್ಯದಿ ನಿಂತು ಕಾಣೊ ಗುರುವಿನಲ್ಲಿ ॥೨॥

ಏಳುಗಿರಿಯೇರೆಂದನೊ ಆ ಗಿರಿಯೊಳು
ಗುರುವಿನರಿಯೆಂದನೊ
ಏಳುಗಿರಿಯೇರೆಂಧ ಗುರುವಿನ ಅರಿಯೆಂದ ।
ಹರಿ ಪರಿವಿಧದಿಂದ ಕಾಯೋ ನೀ ಖಾದರಲಿಂಗ ॥೩॥

ರಾಯಚೂರ ಪುರದಲ್ಲಿ ಮೆರೆಯುವ ಜಹಿರಾಬಾದಿನಲ್ಲಿ
ವರಗುರು ಹನುಮೇಶ ಇರುವನೆಲ್ಲರಲ್ಲಿ ।
ಶಿವಯೋಗಿ ತಿಪ್ಪಣ್ಣನ ಕಮಲ ಹೃದಯದಲ್ಲಿ ॥೪॥

೮

ಸುಮ್ಮನಿದ್ದಾರ ನಿಜ ಸಿಗೋದಿಲ್ಲ
ಮಾಯಾ ಮರವಿನೊಳಗೆ ಬಿದ್ದು ಮರಿತಿಯೆಲ್ಲ ॥ಪ॥

ಮೂರು ಮಾರೂ ಅಳಿಯಲಿಲ್ಲ
ಆರನ್ನು ಅಳಿಯದೆ ಅರ್ಥವಾಗೋದಿಲ್ಲ ।
ಅಷ್ಟಮದಗಳ ನೀನು ಕಳೆಯಲಿಲ್ಲ
ಮದಕಳೆಯದೆ ಮಾದೇವ ನೀನಲ್ಲ ॥೧॥

ಗುರುವಿನ ಗುರು ತರಿಯಲಿಲ್ಲ
ಗುರು ಕರುಣಾ ಇಲ್ಲದೆ ಗುರುತಾಗೋದಿಲ್ಲ ।
ಅರುವು ನಿನಗೆ ತಿಳಿಯಲಿಲ್ಲ
ಅರುವನ್ನು ತಿಳಿಯದೆ ಮುರಹರಿ ನೀನಲ್ಲ ॥೨॥

ನಿಜವೇನೆಂದು ನಿನಗೆ ತಿಳಿಯಲಿಲ್ಲ
ನಿಜವನ್ನು ತಿಳಿಯದೆ ನಿಜಯೋಗಿಯಲ್ಲ ।
ಆಸೆಯುಃ ಅಳಿಯಃಲಿಲ್ಲ
ಆಸೆಯಳಿಯದೆ ಈಶ ನೀನಲ್ಲ ॥೩॥

ಮರೆತಿರುವ ರಾಯಚೂರಲ್ಲ
ಜಹಿರಾಬಾದಿನಲ್ಲಿ ನಿಜ ಸಾರುವದಲ್ಲ ।
ಶಿವಯೋಗಿ ತಿಪ್ಪಣ್ಣಯ್ಯ ಬಲ್ಲ
ನಿಜಗುರು ಹನುಮೇಶ ತಿಳಿಸಿಃದ ಎಲ್ಲ ॥೪॥

೯

ಲಿಂಗವಿಲ್ಲದ ಪಕ್ಷಿ ನೋಡಮ್ಮ ನಿನ್ನಂಗದಲ್ಲಿ ಮೂರು ಕಾಲಲಿನಕೆವುದಮ್ಮ
ಅಂಗವಿಲ್ಲ ಲಿಂಗವಿಲ್ಲ ಏಳು ಮಂದಿನ ನುಂಗಿತಲ್ಲ
ಮಂಗಳ ಮಹಿಮಾ ಅರಿಯಲಿಲ್ಲ ಕಣ್ಣಿಗದು ಕಾಣಲಿಲ್ಲ ॥ಪ॥

ಮೂರು ಆರು ಸೇರುತಿತ್ತಮ್ಮ
ಹನ್ನೆರಡು ಯೋಜನ ಎತ್ತರವಾಗಿ ಕಾಣುತಿತ್ತಮ್ಮ ।
ಮೂರು ಆರು ಸೇರುತಿತ್ತು ಹನ್ನೆರಡೇ ಜನ ಕಾಣುತಿತ್ತು
ಅತ್ತಿತ್ತ ನೋಡುತ್ತಿತ್ತು ಹಗಲಾ ಮೂವತ್ತು ಗಾವುದಿತ್ತು
॥೧॥

ಮೂನ್ನೂರರವತ್ತು ದೂರವಿತ್ತಮ್ಮ ಅರ್ಧ ಕಪ್ಪು ಕಾಣತಿತ್ತಮ್ಮ
ಮೂನ್ನೂರರವತ್ತು ದೂರವಿತ್ತು ಅರ್ಧ ಕಪ್ಪು ಕಾಣತಿತ್ತು
ಇಪ್ಪತ್ತೇಳು ಏರುತಿತ್ತು ಯೋಗಿ ತಿಪ್ಪಯ್ಯಗ ಗೊತ್ತು ॥೨॥

ಧರೆಯೊಳು ರಾಯಚೂರಮ್ಮ ಜಹಿರಾಬಾದಲಿ
ಶರಣತಿಪ್ಪಣ್ಣಾನಮ್ಮ
ಅಂಗಲಿಂಗ ಸಂಗಾಮಾಡಿ ಲಿಂಗದನುವ ತಿಳಿದು ನೋಡಿ
ಭಕ್ತರೆಲ್ಲ ಕೂಡಿ ಗುರುಹನುಮೇಶನ ಕೊಂಡಾಡ್ಯಾರಮ್ಮ
॥೩॥

೧೦

ಏನು ಹೇಳಲಮ್ಮ ಈ ಭವದ ಭಾದಿ ಹೋಗದಮ್ಮ ತಂಗಿ
ಏನು ಹೇಳಲಮ್ಮ ಸಂದುನಿಲ್ಲದಂಗ ಭಾವ ಭಂದನ
ದೊಳು ಬಿದ್ದು ಭವಕೆ-ಬಂದೇನಮ್ಮ ॥ಪ॥

ಮಣ್ಣಿನ ದೇಹವಮ್ಮ ಕುಂಬಾರ ಗಡಿಗೆಮ್ಮ ತಂಗಿ
ಏನು ಹೇಳಲಮ್ಮ ಅಮ್ಮನ ಗರ್ಭದಲ್ಲಿ ಒಂಭತ್ತು
ತಿಂಗಳಿದು ಹೊರಗೆ ಬಂದೆನಮ್ಮ ॥೧॥

ಹೆಂಡರು ಮಕ್ಕಳಮ್ಮ ಕಂಡರೂ ಸೇರರಮ್ಮ ತಂಗಿ
ಹೆಂಡರು ಮಕ್ಕಳು ಕಂಡರೂ ಸೇರರು ಸುಖವೇ ಇಲ್ಲಮ್ಮ ॥೨॥

ಆಸೆಯು ತಿಳಿಯಮ್ಮ ಈ ಭವದ ಪಾಶವ ತಿಳಿಯಮ್ಮ
ಆಸೆಯ ಅಳಿಯಮ್ಮ ಪಾರವ ಕಳಿಯಮ್ಮ ಹನುಮೇಶನ
ಕಾಣಮ್ಮ ॥೩॥

ಧರೆಯೊಳು ಅಧಿಕಮ್ಮ ರಾಯಚೂರ ಜಹಿರಾಬಾದಿಯಮ್ಮ
ಏನು ಹೇಳಲಮ್ಮ ಗುರು ತಿಪ್ಪಣ್ಣ ಮಹಿಮಾ ಯಾರಿಗೂ ತಿಳಿಯದಮ್ಮ ॥೪॥

೧೧

ಬ್ಯಾಡೊ ನಿಮ್ಮಯ ಸಂಗ ತಿಳಿಯಲೊ ಮಂಗ
ಬ್ಯಾಡೊ ನಿಮ್ಮಯ ಸಂಗ ತಿಳಿಯಲಿಲ್ಲ ತಿಳಿಯಲಿಲ್ಲ ಅಂತರಂಗ
ಕಚಿಪಿಚಿ ನಿನ್ನ ಗುಣ ಮೆಚ್ಚುವರಿಲ್ಲ ಜನ
ಬ್ಯಾಡೊ ನಿಮ್ಮಯ ಸಂಗ ತಿಳಿಯೋ ಕೂಡಲ ಸಂಗ ||೧||

ಪರಸ್ತ್ರೀಯರ ಸಂಗ ನೀ ಮಾಡಿ ಆಗಿಹೋದಲ್ಲ ಭಂಗ
ಅಂಗ ಭಂಗ ಮಾಡಿ ಸಂಘ ತಿಳಿಯಲಿಲ್ಲ ನಿಜಲಿಂಗ
ಈಭೂತಿ-ಹಚ್ಚತಿದ್ದಿ ಬಿಡಲಿಲ್ಲ ನಿನ್ನ ಕಲಿತ ಬುದ್ಧಿ ||೧||
ಅತ್ತ-ಇತ್ತ ನೋಡೋ ಬುದ್ಧಿ ತಿಳಿಯಲಿಲ್ಲ ಇದರ ಸುದ್ದಿ ||೨||

ಕೊರಳೊಳಗ ಲಿಂಗ ಕಟ್ಟಿ ಮಾಡಲಿಲ್ಲ ಮನಸು ಗಟ್ಟಿ
ಗಡಿಬಿಡಿ ಮಾಡಿಬಿಟ್ಟೆ ತಿಳಿಯಲಿಲ್ಲ ನಿಜಗಟ್ಟಿ
ರಾಯಚೂರಪುರದಲ್ಲಿ ಮೆರೆಯುವ ಜಹಿಂರಾಬಾದಲ್ಲಿ
ಅಲ್ಲಿ ಇಲ್ಲಿ ಎಲ್ಲೂ ಇಲ್ಲ ತಿಳಿಸುವ ತಿಪ್ಪಣ್ಣ ಎಲ್ಲ ||೩||

೧೨

ನೋಡ ಬಂದೇನಯ್ಯ ನಿನ್ನ, ಕರುಣಿಸಯ್ಯ ನೀನು ಎನ್ನ
ನೋಡ ಬಂದೇನಯ್ಯ ನಿನ್ನ ||ಪ||

ಯೋಗಮಂಟಪದ ಸ್ಥಾನದಲ್ಲಿ ಕತ್ತಲೊಳಗೆ ಕರೆದು ಎನ್ನ
ಮತ್ತೆ ಬಾರದಂತೆ ಎನಗೆ ಗೊತ್ತು ತೋರಿದಯ್ಯಾ ನೀನು ||೧||

ನಾದಬಿಂದು ಕಳವ ತೋರಿ ವಾದಭೇದವಿಲ್ಲದೆ ಮಾಡಿ
ಪೀಡ ಪಿಂಗಳೆಂಬೊ ಎರಡು ಕಣ್ಣು ತೆರೆದು ಕರುಣಮಾಡಿ ||೨||

ಪಂಚವರ್ಣದಲ್ಲಿ ಆರು ಚಕ್ರ ಅದ್ವೈತಾತ್ಮ
ಏಳು ಚಕ್ರ ಏರಿನೋಡಿ ನುಡಿಯುತಿರುವ ನಾದತೋರಿ ||೩||

ಧರೆಯೊಳು ರಾಯಚೂರು ಗ್ರಾಮ ಜಹಿರಾಬಾದಿ ಇರುವನೇಮ
ಸದ್ಗುರು ಹನುಮೇಶನಾ ಶಿವಯೋಗಿ ತಿಪ್ಪಣ್ಣಯ್ಯ ಮಹಿಮ ||೪||

೧೩

ಯುದ್ಧವ ನೋಡಿದಿಯಾ ಕುರುಕ್ಷೇತ್ರ |
ಕದನವ ಕಂಡಿದಿಯಾ ||ಪ||

ಯುದ್ಧವ ನೋಡಿದೆ ದ್ವಾಪರ ಯುಗದಲಿ
ವೀರ ಧನಂಜಯನ ಧ್ವಜವನೇರಿದ ಯುದ್ಧ |
ಪಾಂಡವನಂದನರು ಪರಿಪರಿವಿಧದಿ
ಪರಿಣಾಮದಿಂದ ಪರಿತಪಿಸುತಿಹರು ||೧||

ಏನು ಹೇಳಲಿ ಅವರ ಅಜ್ಞಾತ ವಾಸದಲಿ
ದುರುಳ ಕೀಚಕನನ್ನು ಗುದ್ದಿ ಕೊಲ್ಲಿದ ಯುದ್ಧ |
ಕಾನನದಡವಿಯೊಳು ಕತ್ತಲ ರಾತ್ರಿಯೊಳು
ಅರಗಿ ನಮನೆಯೊಳು ಯಾರೂ ಅರಿಯದಂತೆ ಪಾರು ||೨||

ಗಂಗಾ ಯಮುನಾ ನದಿಯಲಿ ಮುಳುಗಿದಾಗ
ಕೋಳಿತು ಕರ್ಣದಲಿ ಚಕ್ರವ್ಯೂಹದಲಿ |
ಯಾರೂ ಕಾಣದಂತೆ ಕಂದನ ಕರಗಳ
ಎತ್ತಿ ಕತ್ತರಿಸಿದ ಕರ್ಣ ಯುದ್ಧ ||೩||

ಹತ್ತು ಮಂದೀಯ ಮುಂದ
ಶಿರೋಮಣಿಯ ಸೀರೆಯ ಎಳೆದು ತಂದು |
ಸೀರೆಯಃ ಸೆಳೆಯುವ ದುಷ್ಟ ದುಶ್ಶಾಸನನ
ಕರುಳ ತೆಗೆದು ರಕ್ತ ತಿಲಕವನಿಟ್ಟ ಭೀಮ ||೪||

ಪರಮಾತ್ಮನ ದಯದಿಂದ ಆ
ಪಾರ್ಥನು ಗುರುಹಿರಿಯರನು ಕೊಂದ |
ಕರ್ಮವು ಹೆಚ್ಚಿತು ದ್ವಾಪರ ಮುಳುಗಿತು
ಧರ್ಮವೊಂದುಳಿದಿತ್ತು ಸ್ವರ್ಗವ ಸೇರಿತು ||೫||

ಕರ್ಮವು ಕಳಿಯಬೇಕಲ್ಲಿ
ರಾಯಚೂರೆಂಬ ಜಹಿರಾಬಾದಿನಲ್ಲಿ
ಶ್ರೀ ಗುರು ಹನುಮಂತೇಶ ಇರುವನಲ್ಲಿ
ಶಿವಯೋಗಿ ತಿಪ್ಪಣ್ಣನ ಕಮಲ ಹೃದಯದಲ್ಲಿ ॥೬॥

೧೪

ನಾನೇ ಒಳ್ಳೆಯ ಗರತಿ ಮಹಾ ಪತಿವ್ರತೆ
ಮೂರುಲೋಕದ ಸ್ತುತಿ ಮಾಡುವೆ ಉತ್ಪತ್ತಿ ॥ಪ॥

ಬ್ರಹ್ಮನ ಶಿರಕಡಿಸಿ ಗುರುವಿಪ್ರರಿಗೆ ವಿಷವ ಕುಡಿಸಿ
ನಾಭಿಕಮಲದಲ್ಲಿ ಹರಿನಾರಾಯಣನ
ಹತ್ತು ಅವತಾರವೆತಿಸಿ ನಾನೇ ಒಳ್ಳೆಯ ಗರತಿ ॥೧॥

ದ್ವಾಪರದಲ್ಲಿ ಜನಿಸಿ ದ್ರೌಪದಿಯಾಗಿ ಐದು ರೂಪವ ಧರಿಸಿ
ಐದು ರೂಪವ ಧರಿಸಿ ಆರನೇವನನ್ನು ಬಯಸಿ
ಜೂಜಿನಲ್ಲಿ ಧರ್ಮನ ಕೆಡಿಸಿ ನೂರಾ ಒಂದನ್ನು ಅಳಿಸಿ ॥೨॥

ವಿಕ್ರಮ ನಾಮವ ಮುರಿಸಿ ಕೈಕಾಲು ಕಡಿಸಿ
ದೀಪರಾಗಕ್ಕೆ ಒಲಿಸಿ ಹರಿಶ್ಚಂದ್ರನ ಸುಡುಗಾಡು ಸೇರಿಸಿ
ವಿಶ್ವಾಮಿತ್ರ ಗುರುವಾಗಿ ತಪಸಿಗೆ ನೀ ಒಲಿಸಿ ॥೩॥

ಧರೆಯೊಳಧಿಕವೆನಿಸಿ ಜಹಿರಾಬಾದಿಯ ನೇಮಿಸಿ
ಶಿವಯೋಗಿ ತಿಪ್ಪಣ್ಣಯ್ಯನ ನಾಮವ ನುಡಿಸಿ
ಸದ್ಗುರು ಹನುಮೇಶನ ಪಾದಕ್ಕೆ ಒಂದಿಸಿ ॥೪॥

೧೫

( ತೆಲುಗು )

ಎಕ್ಕಡ ಉನ್ನಾಡುರಾ ದೇವುಡು
ಚಿಕ್ಕಾಡು ದೊರಕಾಡುರಾ ।
ಎಕ್ಕಡ ಉನ್ನಾಡು ಚಿಕ್ಕಾಡು ದೊರಕಾಡು
ಸಕ್ಕಗ ಪಲಿರೆತೆ ಪಕ್ಕಾಲೆ ಉನ್ನಾಡು ॥ಪ॥

ಪಂಚಭೂತಾ ಮೂಲ್ಕೆದಾದುರಾ
ಪ್ರಪಂಚಮು ಕರ್ಮತು ಕಲಿಗಿಂದಿರಾ ।
ಸಂಚಿತ-ಕರ್ಮಾಲ ಚಿಂತಾಯಿ ವಿಡಿಚಿತೆ
ಕಂಚಿತ ದೇವುಡು ಕಂಟೀಲ ಉನ್ನಾಡು ||೧||

ಸ್ಥಿರಮುಕಾದು ಇದಿರಾ
ಸಾರಮುಸಾದಿಂಚಿ ಚುಡವಲೇರಾ ।
ಸ್ಥಿರ ಮುಗಾದು ಇದಿ ಸಾದಿಂಚಿ ಚುಡವಾಲೆ
ಸಾರಮುಲುನ್ನಾಡು ಸತ್ಯಮೆ ದೇವುಡು ||೨||

ಆಶಾಮುರಿಡವಲೇರಾ
ದೋಷಮು ಕುಶವ್ಯಯವಲೇರಾ ।
ಆಶಾಮುಲಿಡಿಸಿತೆ ದೋಷಮಲು ಕೋಶಿತೆ
ಕಾಶೀಲುನಾಥುಡು ಕಾನಕೆ ಎನ್ನಾಡು ||೩||

ದಿಕ್ಕುಲು ತೆಲಿಗಿಂದಿರಾ ಈ
ರಾಯಚೂರು ಜಹಿರಾಬಾದುನ್ನಾದಿರಾ ।
ಶಿವಯೋಗಿ ತಿಪ್ಪಣ್ಣಯ್ಯ ನಾಮ ಮುಪಲಕಿತೆ
ಗುರು ಹನುಮೇಶಾಡು ಗುರು ಚಿಂಚುತುನ್ನಾಡು ||೪||

೧೬

ಪಾಡಿದೊಂದರು ಒಕ್ಕೆ ಪದಮು ಅದಿ
ಪಲುಕುತುನ್ನದಿ ನೀ ಲೋ ನಿಜಮು ಆದಿ ||ಪ||

ಸದಮ ಲಗ್ನಾನಂಬು ಸ್ಥಿರಮುಗ ನಮ್ಮಿತೆ
ಎಂದೆಂದುಲೇದುನೀಕಿ ಲೋಕಯಲು ಭಯಮು ।
ಐದುರಂಗುಲು ಉನ್ನಾದಮ್ಮದೇನಿ ಅರ್ಥಾಮು
ಎರಗಲೇದಮ್ಮ
ಏಡುಲೋನದೀನಿ ಸಾರಮುಂದಮ್ಮ ಸಾರಮುವೆರಗೀತೆ
ಸಾವುಲೇದಮ್ಮ ||೧||

ಮೂಡುಮೂಳುನ್ನಾದಿ ಸಗಮುದೀನಿ
ಮುಲಾಮು ಎರಗಲೇದಮ್ಮ ।

ನಾಭಿಕಮಲಮಂದು ನಾದಮುಂದಮ್ಮ
ನಾದ ಮುಲುಮಂಚಿ ಮರ್ಮಮೆರಗಮ್ಮ ॥೨॥

ಒಗಟಿಲು ಉನ್ನಾವಿ ರೊಂಡೊ
ರೊಂಡ ನಡುಮಾ ಉನ್ನಾದಿ ಸೊಂದು ।
ರೊಂಡು ನಟ್ಟನಡುಮಾ ಸೊಂದುನ್ನದಮ್ಮಾ
ಸೊಂದುಲು ಸಾದಿಂಚಿ ಎಲಗು ಚೂಡಮ್ಮಾ ॥೩॥

ಧರಿಣೀಲು ಉನ್ನಾದಿ ರಾಯಚೂರು
ಜಹಿರಾಬಾದೀಲು ಉನ್ನಾದಿ ಪೇರು ।
ಶಿವಯೋಗಿ ಶರಣ ತಿಪ್ಪಣ್ಣಯ್ಯಗಾರು
ಗುರುಹನುಮೇಶನಾಮಾಮು ಪಲಕಮನ್ನಾರು ॥೪॥

## ಹೊಸೂರು ತಿಪ್ಪಣ್ಣನ ತತ್ವಪದಗಳು

೧

ಹೂವು ಅರ್ಪಿಸುವೆವು ಶಿವಶರಣ ಮೇಲೆ ।
ಹೂವು ಅರ್ಪಿಸುವೆವು ॥ಪ॥
ಹೂವು ಅರ್ಪಿಸುವೆವು । ಭವರೋಗ ನೀಗುವ ।
ಆವಾವ ಕಾಲದೊಳ್ ಶಿವಪೂಜೆಗೊಳ್ಳುವ ॥ಅ.ಪ॥

ನಡುನೀರ ಮಧ್ಯದಿ । ಪೊಡವಿಯ ನಿಲಸಿ ।
ಒಡೆಯ ತಾನಾಗಿಹನು ॥
ಧೃಡ ಭಕ್ತಿಯಿಂದಲ್ಲಿ ಬೇಡಿದ ವರಗಳ ।
ಅಡಿಗಡಿಗೆ ನೀಡುವ ಗಡ್ಡೆ ಖಾದರ ಲಿಂಗಗೆ ॥೧॥

ಬಂಧುರ ನಾದವನು । ಎಂಥ ಮೋಕ್ಷನು ।
ಮಂದಹಾಸವ ಬೀರುವನು ।
ನಂದಿವಾಹನ ಮಿತ್ರ ನಂದನನೇ ಪವಿತ್ರ ।
ಚಂದಾಲಿಂಗಸ್ವಾಮಿ ಚಂದ್ರಚೂಡನ ಮೇಲೆ ॥೨॥

ದೂರದೇಶದಿ ಬಂದನು । ಧಾರುಣಿಯೊಳು ।
ಮೇರುವಿನಂತೆ ಮೆರೆದನು ।
ಗುರುಲಿಂಗ ಜಂಗಮ ಸ್ವರೂಪ ತಾನಾದ ।
ಪರಮ ಪೂಜ್ಯ ಶ್ರೀ ಗುರು ಹನುಮೇಶರ
ಮೇಲೆ ॥೩॥

ಸತ್ಕುಳ್ಳ ಶರಣನು । ಸತ್ಯವ ತೋರಿ ।
ಉತ್ತುಂಗನಾದವನು ।

ತತ್ವ ಬಲ್ಲವರ ಗೊತ್ತಿನೊಳಗೆ ಇರುವ ।
ಉತ್ತಮೋತ್ತಮ ಶಿವಶರಣ ತಿಪ್ಪಣ್ಣಯ್ಯ ಮೇಲೆ ॥೪॥

೨

ಗುರು ಹನುಮೇಶ । ಶಂಭೋ ಸರ್ವೇಶ ।
ಪ್ರಭು ಹನುಮೇಶ । ಜ್ಯೋತಿ ಪ್ರಕಾಶ ॥ಪ॥

ಭಕ್ತರ ಜೀವನ । ಭಯ ನಿವಾರಣ ।
ನೆನೆದರೆ ನಿನ್ನ । ಸರಿವುದು ಮರಣ ॥೧॥

ಪರಮ ಪುರುಷ । ತ್ರಿಭುವನೇಶ ॥
ಭಕ್ತರ ಪೋಶ । ನೀಗಿಸುದೋಷ ॥೨॥

ಅಗಣಿತ ಮಹಿಮ । ಆತ್ಮಾಭಿರಾಮ ।
ಪರಮ ಆತ್ಮ । ಪುರುಶೋತ್ತಮ ॥೩॥

ನಾದದ ಮೂಲನೆ । ನಿಗಮಾತೀತನೆ ।
ಕಾಲನ ಕಾಲನೆ । ನಿತ್ಯ ನಿರ್ಮಲನೆ ॥೪॥

ರಾಜೂರು ಪ್ರಿಯ್ಯ । ಮೂಹಿಗದಯ್ಯ ।
ನವಪುರಜಾತನ । ನೀ ಸಲುವಯ್ಯಾ ॥೫॥

೩

ಜಯಹೇಜಯ ಸದ್ಗುರುವರ ।
ಜಯಘೋಶ ಮಾಡಿದವರ ।
ಭಯವೆಲ್ಲ ಪರಿಹಾರ ॥
ಮಾಯಾವಿಮಾರ ನಿನ್ನ ಮಹಿಮೆಯ ಪಾರ ॥೧॥

ವೀಳ್ಯದೆಲೆ ಕಂಗುಗಳೇ ।
ಎಳೆನೀರ ತೆಂಗುಬಾಳೆ ।
ಫಲಪುಷ್ಪದಿಂದಲೇ ॥
ಕಾಲಹರನಿನ್ನ । ಪೂಜೆಗೈಯ್ವೆನು ॥೨॥

ಶಿವ ಶಿವ ಶರಣರು ।
ಜಾವಜಾವಕೆ ನೆನವರು ।
ಭವರೋಗ
ದೇವಾದಿದೇವ ನಿನ್ನ । ಪಾದ ನಂಬಿದೆ ॥೩॥

ಗಂಗಾ ಯಮುನ ಸರಸ್ವತಿ ।
ತುಂಗಭದ್ರೆ । ನೇತ್ರಾವತಿ ।
ಸಂಗಮದಿ ನೀನಿರು ತಿ ।
ಅಂಗ ರಹಿತನೇ ಮಂಗಳ ಮೂರುತಿ ॥೪॥

ಧರೆಗಧಿಕ ದೊರೆಪುರ ।
ಗುರು ಹನುಮೇಶ್ವರ ।
ಚರಣದೊಳು ಬಾಗಿ ಶಿರ ॥
ಪಾರನ ವಪುರಜಾತ ಮುಗ್ಯೆಕರ ॥೫॥

೪

ದರುಶನ ಕೊಡು ಬಾರಯ್ಯ ಓ ।
ಕರುಣಾಮಯ ಗುರುರಾಯಾ ।
ದಾರಿ ಕಾಯುವೆನೆಯ್ಯಾ । ನಿನ್ನ ।
ದಾರಿ ಕಾಯುವೆನೆಯ್ಯ ॥ಪ॥

ಜನುಮಜನುಮದಿ ಕಾಣಲು ನಿನ್ನ ।
ನಾನೀ ಜನ್ಮದಿ ಅವತರಿಸಿದೆನು ।
ಇನ್ನಾದರೂ ತವ ಚರಣ ಕಮಲವ ।
ಸನ್ನಿಧಿ ಯೋಳಿರಿಸಯ್ಯಾsss ॥೧॥

ಪರಮ ಪಾತಕ ದುರಿತಗಳೆಲ್ಲನ ।
ದೂರ ಮಾಡಯ್ಯಾ ಯನ್ನ ।
ಮೊರೆಯನಾಲಿಸಿ ಕರವ ಪಿಡಿಯಲು ।
ಕರುಣಿಸಿ ನೀ ಬಾರಯ್ಯಾsss ॥೨॥

ಹಿಂದಕೆ ಮರಳಿ ಪೋಗದಿರೆಂದು ।
ಮುಂದಿನ ಪಥವ ತೋರಿಸಯ್ಯ ।

ವಂದಿಸಿ ಬೇಡುವ ಕಂದನ ನೀನು ।
ಬಂದು ಉದ್ಧರಿಸಯ್ಯ ।।೩ ।।

ಜಗದೋಳು ಮೆರೆವ ರಾಜೂರು ಪುರದ ।
ಶ್ರೀ ಗುರು ಹನುಮೇಶನ ಮಂದಿರದ ।
ಬಾಗಿಲ ಬಳಿ ನಿಂತು ನವಪುರಜಾತನು ।
ಕೈಗಳ ಮುಗಿವೇನಯ್ಯsss ।।೪ ।।

೫

ಕೈಲಾಸಕೆ ಹೋಗಬೇಕಮ್ಮ । ಲಗುಬಗೆಯಿಂದ ।
ಕೈಲಾಸ ಕಾಣಬೇಕಮ್ಮ ।।ಪ ।।
ಕೈಲಾಸಕೆ ಹೋಗಬೇಕು । ಶಿವನ ದರುಶನ ಪಡೆಯಬೇಕು ।
ಅಲ್ಲೇ ವೈಕುಂಠ ಸತ್ಯ ಲೋಕವೆರೆಡು ಕೂಡಿರುವಂಥ ।।೧ ।।

ಕರಮಂಡಲ ಇರುವುದು ನೋಡಮ್ಮ । ಓಂ
ಕಾರದಲ್ಲಿ ।
ಅಮರುತದಿ ತುಂಬಿತುಳುಕುತ ।।
ಡಮಡಮ ಡಮರುಗನಾದವ ನುಡಿಸುತನಿರುವನಲ್ಲಿ ।
ಒಮ್ಮನದಿ ಆಲಿಸಿ ಕೇಳಲು ಬ್ರಹ್ಮನೇ ನೀನಾಗುವಂಥ
।।೨ ।।

ರವಿಚಂದ್ರ ಪುರವೊಂದೊತಮ್ಮ । ಎಡೆಬಿಡದೆಯಲ್ಲಿ ।
ಮೂವರು ಸುಳಿಯುತಲಾರಮ್ಮ ।।
ಜೀವಭಾವದೋಳಿದ್ದು ಚಿತ್ತವಿಟ್ಟು ಕೇಳಲವರು
ಭವದ ಭವಿಷ್ಯವನ್ನು ಅನುಗಾಲ ಪೇಳುವರಥ ।।೩ ।।

ಮುಪ್ಪುರಿ ಬಿಗಿದಾಕಿದೇ ನೋಡಮ್ಮ । ಮಧ್ಯ
ಹೃದಯದಲ್ಲಿ ।
ತಪ್ಪದೆ ಮನ ಒಪ್ಪಿಸಬೇಕಮ್ಮ ।।
ಗಪ್ಪನೆ ಗುರಿಯಿಟ್ಟು ದೃಷ್ಟಿ । ಶರವ ಪ್ರಯೋಗಿಸಮ್ಮ ।।
ತ್ರಿಪುರಸಂಹಾರವಾಗಿ । ಕರ್ಪೂರಗೌರಳನು ಕಾಣುವಂಥ
।।೪ ।।

ಒಂಭತ್ತು ಇಲ್ಲಿಗಾಯ್ತಮ್ಮ । ಮುಂದಿರುವ ನಾಲ್ಕು ।
ಅಂಬರಾಗ್ರದಿ ಗರ್ಜಿಸುವ ।
ಶಾಂಭವಿಯ ಮನವೊಲಿಸಲು ನಿಷ್ಕಾಮದಿ ಪೂಜಿಸಮ್ಮ ।
ಶಂಭುವೆ ನೀನಾಗುವೆಯೆಂದು । ಸಂಭ್ರಮದಿ ಹರಸುವಂಥ ||೫||

ಧರಣಿ ಮಧ್ಯದಲ್ಲಿರುವ । ರಾಜೂರಿನಲ್ಲಿ ।
ಮೆರೆವ ಸದ್ಗುರು ಹನುಮೇಶನ ||
ಚರಣಾರವಿಂದ ಪೂಜಿಪ । ಶರಣನವ
ಪೂಜಾತನು ।
ಸಾರಿದ ತತ್ವವನ್ನು
ಕೇಳೋರಮನದೋಳಿರುವ ||೬||

೬

ಗುರುವರನು ಯನಗೆ ಬೋಧಿಸಿದ ।
ನಾದದೊಳಡಗಿದ ಮೂಲ ಮಂತ್ರವ ತಿಳಿಸಿದ ||ಪ||

ಅಜ್ಞಾನದಿ ನಾ ಅಂಧ ಕನಾಗಿದ್ದೆ ।
ಸುಜ್ಞಾನದ ನೆಲೆ ಸೂಚಿಸಿದ ||
ಅಜ್ಞಾನದ ಪೊರೆ ಹರಿದು ಬೀಸಾಡಿದ ।
ಜ್ಞಾನದ ಮಾರ್ಗದೋಳು ನಡಿಯೆಂದ ||೧||

ಗುರು ಪಾದವ ನಾ ಅರಿಯದಲ್ಲಿದ್ದೆ ।
ದಾರಿ ಕಾಣದೆ ನಾ ಬಹಳ ತಿರುಗಿದೆ ।
ದಾರಿ ತೋರಿಸಿದ ಪಾದ ತಿಳಿಸಿದ ।
ಚರಣಕೆ ಎರಗಿ ನಡೆಯೆಂದ ||೨||

ನುಡಿನಡೆಯೋಳು ಬೆರಿಯೆಂದ ।
ನುಡಿಯು ವದೇನು ಕೇಳೆಂದ ||
ಗಡನಾನೆಲಬುವದು ಬಿಡುಯೆಂದ ।
ತಡಮಾಡದೆ ಮುಕ್ತಿ ಪಡೆಯೆಂದ ||೩||

ಕಾವಲುಗಾರನೊಬ್ಬ ಶಿಖರದ ಮೇಲೆಂದ ।
ಕಾವುತಲಿರುವನು ಬಲದಿಂದ ||

ಅವನೊಡನೆ ಜರಿದಾಡಲು ಮುದದಿಂದ ।
ಅವಸರವಿಲ್ಲ ಸ್ಥಿರಮುಕ್ತಿಗೆಂದ ॥೫॥

ವಾಸುಳುಳ್ಳ ರಾಜರೂ ಪ್ರಭು ಹನುಮೇಶನ ।
ಆಶೀರ್ವಾದದ ಬಲದಿಂದಾ ಆಆಆ ।
ಹೊಸೂರು ಗ್ರಾಮದ ಬ್ರಹ್ಮನಿಷ್ಠ ತಿಪ್ಪಣ್ಣ ।
ತುಸು ಹೇಳಿದನು ಅನುಭವದಿಂದ ॥೬॥

೭

ಇವನೆಂಥ ಒಳ್ಳೇ ಮಾನವನು ।
ಗುರು ಧ್ಯಾನದೊಳಗೆ ಬಿದ್ದು ಉರುಳಾಡುವನು ॥ಪ॥

ಅಲ್ಲಮನು ಹುಟ್ಟಿ ಬಂದಾನ ।
ಈ ದೇಹದೊಳಗೆ ಮನೆ ಮಾಡಿಕೊಂಡಿಹನು ।
ಅಂತರಾತ್ಮದಲಿ ಕುಂತಾನ ।
ಸಣ್ಣ ತಂತಿಯಂತೆ ಕಿವಿಯೊಳಗೆ ಊದುವನು ॥೧॥

ಆರು ಮಂದಿನ ಕೊಂದಾನ ।
ಸಂದು ತಿಳಿಸಲು ಮುಂದೆ ತಾನೆ ಬಂದಾನ ॥
ಮೂವ್ವರನೊಂದು ಮಾಡ್ಯಾನ ।
ಜಡಿಮ ಹಾಕಿದ ಬಾಗಿಲ ಕದವ ತೆರೆದಾನ ॥೨॥

ಹತ್ತು ಹರದಾರಿ ಮೇಲಾನ ।
ಮತ್ತೆ ಒಂದು ಎರಡು ಮೂರು ಏರಿ ಕುಂತಾನ ॥
ಮಾನವನೆಂದರೆ ಮಹದೇವಾನು ।
ಜನನ - ಮರಣಾದಿಗಳಿಗೆ ದೂರವಾದವನು ॥೩॥

ಶೃಷ್ಟಿಗಧಿಕ ರಾಜೂರು ಶರಣ ।
ಶ್ರೇಷ್ಠ ಸದ್ಗುರು ಹನುಮೇಶ ಅಲ್ಲಮನ ಸಮಾನ ॥
ಬ್ರಹ್ಮನಿಷ್ಠ ನವ ಪುರ ಜಾತನು ।
ದಿಟ್ಟ ಮನಸ್ಸಿಗೆ ಹೊಡೆದನು ಅನುಭವದ ಬಾಣ ॥೪॥

## ೮

ಶಿವನ ಸ್ಮರಣೆ ಮಾಡು ಜವಧಿ ।
ದೇವಾಧಿದೇವ ನೀನಾಗುವಿ ಭರದಿ ।
ದೇವಾಧಿದೇವ ನೀನಾಗುವಿಭರದಿ ।ಪ ॥

ನೆಲೆಯು ತಿಳಿಯೋ ಪರಮಾತ್ಮನ ।
ನಾಲಿಗಿಲ್ಲದ ಗಂಟೆ ನುಡಿತಿದೆ ಕವನ ॥
ಆಲಿಸಿ ಅನುದಿನ ಮಾಡು ಸಾಧನ ।೧ ॥

ಆರರ ಕೊನೆಯಲ್ಲಿ ಇರುವ ಉಸವನ ।
ಅರಿತು ಪೂಜೆಯ ಮಾಡಲು ಮುಂದಿನ ।
ದಾರಿಯ ತೋರ್ವನು ಸುಲಭದಿತಕ್ಷಣ ।೨ ॥

ಭ್ರ ಮಧ್ಯದೋಳು ಕಪಿಯ ನಿಲ್ಲಿಸು ।
ಶ್ಯಾಮ ಸುಂದರ ಅಜಹರನ ಧ್ಯಾನಿಸು ।
ತ್ರೈ ಮೂರ್ತಿಗಳ ಶಕ್ತಿಯ ಗಳಿಸು ।೩ ॥

ಮಕರಂದ ಬೀರುವ ಸ್ಥಳದೋಳ್ ಸುಳಿದು ।
ಅಕ್ಕರಿದ ಸುರ ಪಾನವ ಸವಿದು ।
ಮುಕುಂದನ ವಿರುದಾಂಕಿತ ಪಡೆದು ।೪ ॥

ಪೊಡವಿಯೋಳು ರಾಜೂರು ಪ್ರಭು ಹನುಮೇಶನ ।
ಅಡಿಗಳ ಪೂಜಿಪ ನವಪುರಜಾತನು ॥
ಗಡನೆ ಪಡೆದನು ಗುರು ಕರುಣವನು ।೫ ॥

## ೯

ಗಂಡನು ದೊರಕಿದ ಯೆನಗಮ್ಮ ।
ಮಂಡಲತ್ರಯ ಮೀರಿ ಇರುವಂಥ ।
ಗಂಡನೆಂದರೆ ಅವಾ ಪುಂಡನವ್ವ ತಂಗಿ ।
ಅಖಂಡ ಮೂರುತಿಯಾಗಿರುವ ।ಪ ॥

ಪ್ರಾಯದ ತರುಣಿಯು ನಾನಮ್ಮ ತಂಗಿ ।
ಹೇಯದ ಜೀವನ ಸಾಕಮ್ಮ ।

ಪ್ರಿಯತಮನೊಂದಿಗೆ ಸರಸವಾಡಮ್ಮ ।
ಹೋಯಿತು ನರಜನ್ಮದ ಚಿಂತೆಮ್ಮ ॥೧॥

ಕತ್ತಲ ಮನೆಯಲ್ಲಿ ಮೈ ಮರೆತು ತಂಗಿ ।
ಸತ್ತವಳಂತೆ ನಾ ಮಲಗಿದ್ದೆ ॥
ಜ್ಯೋತಿ ಪ್ರಕಾಶ ಒಡಮೂಡಿ ತಂಗಿ ।
ದತ್ತಾತ್ರಯ ರೂಪ ತೋರಿಸಿದ ॥೨॥

ಭಾರಿ ಸಾಗರದಾಚೆಗೆ ಕುಳಿತು ।
ನಾರಿ ಬಾರೆಂದು ಕರೆಯುವನು ॥
ಸೆರಗನು ಬೀಸಿ ಸೇತುವೆ ಕಟ್ಟಿ ।
ಸೇರಿದೆ ಆತನ ಸನ್ನಿಧಿಗೆ ॥೩॥

ಕ್ಷಿತಿಯೋಳು ರಾಜೂರು ಪ್ರಭು ಹನುಮೇಶನ
ಸತಿಯಾಗಿ ನವಪುರ ಜಾತನು ॥
ಪತಿಸೇವೆ ಮಾಡಿ ಬಯಸಿದೆ ಮುಂದಿನ ।
ಗತಿಯನು ತೋರೆಂದು ಬೇಡಿದೆನು ॥೪॥

೧೦

ನಾನೊಂದು ಹೇಳತೀನಿ ಕೇಳಮ್ಮ ।
ನೀ ವಿಚಾರ ಮಾಡುವ ಮಾತಮ್ಮ ॥ಪ॥
ಅಂತರಂಗದ ಭಾವದಂತು ನೀ ತಿಳಿದರೆ ।
ಆತಂಕವಿಲ್ಲದೆ ಪೇಳಮ್ಮ ॥ಅ.ಪ॥

ಬೇಡುತಿದೆ ಮನ ಪ್ರಿಯಕರನ ।
ಎಡೆಬಿಡದೆನ್ನ ರಕ್ಷಿಸುವವನ ॥
ತವಕದಿ ಬಿಗಿದಪ್ಪಿ ಆಗಲು ಮಿಲನ ।
ಹರಿವದು ಮುಂದಿನ ಭವ ಬಂಧನ ॥೧॥

ಊರಿನ ವಾಮ ಕಡೆಯಮ್ಮ ।
ಗುಡಿಯೊಳಗಿರುವನು ದೇವರಮ್ಮ ॥
ಪರಿಸುತಲಿರುವನು ಮಂತ್ರವನಮ್ಮ ।
ಗುಪ್ತದ ಗುಣಾಕಾರ ಮಾಡಮ್ಮ ॥೨॥

ಓಂ ಸೋಹಂವ್ವ ಇಬ್ಬರು ಕೂಡಿ ।
ಪ್ರೀತಿಗಾಗಿ ಸಂಸಾರ ಮಾಡಿ ॥
ಪ್ರೇಮದಿ ಮಗನ ಹಡೆದರು ಬೇಡಿ ।
ಹಗಲಿರುಳೆನ್ನದೆ ದುಡಿಯಲು ಜೋಡಿ ।೩ ॥

ಮೂರು ಬೀದಿ ಕೂಡಿದವಲ್ಲಿ ।
ಮುಂದಿನ ದಾರಿಗೆ ಹಚ್ಚೇರಬೇಲಿ ॥
ಯೋಚ್‌ಸಿ ನೋಡಲು ಪ್ರಭೆಯು ಚೆಲ್ಲಿ ।
ಕಾಣ್ಣದು ತ್ರೈಲೋಕವು ಅಲ್ಲೆ ।೪ ॥

ನದಿಯ ದಡದಿ ಶಿವಯೋಗಿ ।
ಕುಳಿತಿರುವನು ಬಲು ಬಿರುಸಾಗಿ ॥
ಸೇವೆಯ ಮಾಡಲು ಮನವ ಬಾಗಿ ।
ಕರೆದೊಯ್ಯನು ನಮ್ಮೂರಿಗೆ ।೫ ॥

ನವಪುರಜಾತನು ರಚಿಸ್ಯಾನ ।
ಬಲ್ಲವರಿಗೆ ಕೈ ಮುಗಿದಾನ ॥
ತತ್ವದ ಸಾರವು ಸಾಧಿಸಿ ಕೇಳ್ಯಾನ ।
ಶ್ರೀ ಗುರು ಹನುಮೇಶ ಹೇಳ್ಯಾನ ।೬ ॥

## ೧೧

ಕಲಿಸಿದನೆ ಸಾಲಿ ಯನಗೆ ।
ಕಾಲರಹಿತನಾದ ಶ್ರೀಗುರು ಹೇಳಿದನ್ನಿಲೆ ।ಪ ॥
ಬಲ್ಲದ ಮನಸಿಗೆ ಪರಿಪರಿ ಬೋಧಿಸಿ ।
ಬಾಲಬೋಧೆಯ ನೀಡಿ ಮೂಲಕ್ಷರವ ತಿಳಿಸಿ ।೧ ॥

ಕಾಯಾಪುರದ ಶಾಲೆಯೊಳಗೆ ।
ಕಾಯವಿಲ್ಲದ ತಾನೊಬ್ಬ ಬೋಧಕನಾಗಿ ॥
ಹೊಯ್ದಾಡುವ ಯನ್ನ ಮನವ ನಿಲ್ಲಿಸಿ ತನ್ನ ।
ಜಯಭೇರಿ ನಾದದೊಳು ತಲ್ಲೀನಗೊಳಿಸಿ ।೨ ॥

ಹರಿಹರ ಬ್ರಹ್ಮಾನಂದರು ।
ಮೂರು ವರ್ಗದ ಭೋದನೆ ಮಾಡುವರವರು ॥

ತ್ವರಿತದಿ ಏಳನೇ ಪುಸ್ತಕವನೋದಲು ।
ಮೂರು ಲೋಕದ ಸಾರ ತಿಳಿಸಿದರವರು ॥೩॥

ಗುರುದೇವನಾದೇಶದಂತೆ,
ಹಿರಿಯ ಪ್ರೌಢ ವಿದ್ಯಾಲಯ ಪೊಕ್ಕುನಾಕುಳ್ತೆ
ಮರೆಯದೆ ಪ್ರತಿನಿತ್ಯ ಅಭ್ಯಾಸಗೈಯ್ಯಲು
ದೊರಕಿತು ಹತ್ತನೇ ಉತ್ತೀರ್ಣ ಪತ್ರ ॥೪॥

ಸದ್ಗುರುರಾಯನು ಮುಖ್ಯ ।
ಅಧಿಕಾರಿಯಾಗಿಹನು ಶಾಲೆಗೆ ಪಕ್ಕೆ ।
ಹದಿಮೂರು ತರಗತಿಯ ಸಾರವ ಸವಿಯಲು
ಶುದ್ಧನಿನ್ನಾದೆಂದು ಸಿದ್ಧಾಸನದಿ ಕುಳಿಸಿ ॥೫॥

ಅವನಿಯೊಳು ರಾಜೂರು ವಾಸ ।
ಭವರೋಗ ವಿನಾಶಕ - ಶ್ರೀಗುರು ಹನುಮ ॥
ದಿವ್ಯನಾಮಾಮೃತವ ಅನುಗಾಲ ಸೇವಿಸಿ ।
ನವಪುರಜಾತನು ಪೇಳಿದನಮ್ಮ ॥೬॥

## ೧೨

ಇವಾ । ಎಂಥಾ ಗಂಡ ಸಿಕ್ಕ ನೋಡವ್ವ ।
ಹಗಲು ರಾತ್ರಿ ಬಿಡನಮ್ಮ ॥ಪ॥
ಏನೊಂದು ಅರಿಯದ ಯನ್ನ ।
ಸನ್ನೆ ಮಾಡಿ ಕರೆದನು ತಾನು ।
ಹಾರೊ ಹೇಳದ ಮಾತೊಂದು ।
ಸಾರಿ ಹೇಳಿದ ಯನಗಿಂದು ।
ಎಂಥ ಉಪದೇಶ ಮಾಡಿದನು ಬೇಸ ॥೧॥

ಅಲ್ಲಿ ಇಲ್ಲಿ ಸುಳಿಯಗೊಡನವ್ವ ।
ಎಲ್ಲಿಗೋದ್ರು ಬೆನ್ನ ಬಿಡನವ್ವ ।
ಮಲಗಿದ್ದಲ್ಲೇ ಮಲಗಂತನವ್ವ ।
ಮಲಗಿದಷ್ಟು ಬಲು ಪಾಡವ್ವ ।
ಇವನ ಸಹವಾಸದಲ್ಲಿ ಸಂತೋಷ ॥೨॥

ಮೂಲೆ ಮನೆ ಸೇರಂದನವ್ವ ।
ಮೂಲ ಜ್ಯೋತಿ ಹಚ್ಚೆಂದನವ್ವ ॥
ಬೆಳ್ಳನ ಬೆಳದಿಂಗಳವ್ವ ।
ಬೆಳಕಿನಲ್ಲೇ ಕೂಡಿಂದನವ್ವ ।
ಏನು ಆರೂಪ । ನೋಡಲಪರೂಪ ॥೬॥

ಮಾಳಿಗೆ ಮನೆಯಾದವ್ವ ।
ಮೇಲ್ಹೇರಿ ವಾರೆಂದನವ್ವ ।
ಮಲ್ಲಿಗೆ ಹೂಗಳನವ್ವ ।
ಚೆಲ್ಲುತ ತಾ ಬಂದಾನವ್ವ ।
ಎನ್ನ ಕೈ ಹಿಡಿದ ಅಪ್ಪ ಕೊಂಡೊಯ್ದು ॥೭॥

ದೊರೆ ಪೂರದೊಳಗೆ ಮೆರೆವ ।
ಗುರು ಹನುಮೇಶ್ವ ದೇವ ।
ಅವರ ಪಾದ ಪೂಜೆಯೊಳಿರುವ ।
ನವಪುರ ಪಾತನರಾಯ್ಯ ॥
ಎಂಥದಾ ವರವಾ । ಕೊಟ್ಟ ಗುರುದೇವಾ ॥೮॥

೧೩

ಗೆಳತಿಯೇ ಕೇಳಮ್ಮ । ಅದ್ಭುತವಾದ ಸುದ್ದಿ ।
ಹೇಳಲು ಬಾರದಮ್ಮ ॥ಪ॥
ಎಲ್ಲಿ ನೋಡಿದವರಲ್ಲಿ ತಾನು ತುಂಬಿತುಳುಕ್ಯಾಡ್ಯನಮ್ಮ
ನಲ್ಲೆ ಮಣಿಯರಿಗೆಲ್ಲ ತಾನು । ನಲ್ಲನಾಗಿ ಇರುವನಮ್ಮ ॥ಅ.ಪ॥

ಐದು ತರಗಳಿಂದ । ಸಿದ್ಧವಾದೀತಮ್ಮ ।
ಬುದ್ಧನ ಮಂದಿರವಮ್ಮ ॥
ಅದರ ಒಳಗೆ ಇರುವದೊಂದು ಅನಾದಿ
ಶಕ್ತಿಯಡಗಿಕೊಂಡು
ವೇದಶಾಸ್ತ್ರ ಪುರಾಣ ಹುಟ್ಟುವ ಮೂಲ ಪ್ರಾಣವ
ಮಂತ್ರವನು ॥೧॥

ಈಡಾಪಿಂಗಳ ಮಧ್ಯ । ಸುಪುಮ್ನನಾಡಿಯ ।
ಕೂಡಿಸಿಕಬ್ಯಾರಮ್ಮ ॥

ಜಡಿದು ಹಾಕಿದ ಮುದ್ರೆಯನ್ನು ಹೊಡೆದು ಪೋಗುವ ಶಕ್ತಿಯನ್ನು ।
ಒಡೆಯ ಮೂವರ ಸೇವೆಗೈಯ್ಯಲು ಸುಲಭಸಾಧ್ಯವಾಯಿತಮ್ಮ ॥೨॥

ಅಕ್ಷವನಿಲ್ಲಿಸಿ । ದೃಷ್ಟಿಯಂ ಬಲಿಸಲು ।
ಶಿಕ್ಷಣ ಕೊಡಬೇಕಮ್ಮ ॥
ಲಕ್ಷ ತೊಂಭತ್ತಾರು ಸಾವಿರ ಗಣಂಗಳನ್ನಿಂದೆ ತಳ್ಳಲು,
ಮೋಕ್ಷಗುರುವು ತಾನೆಬಂದು ದೀಕ್ಷೆಯನ್ನು ಕೊಡುವನಮ್ಮ ॥೩॥

ಧರೆಯೋಳು ಮೆರೆಯುವ । ರಾಜೂರಿನಲ್ಲಿರುವ
ಗುರು ಹನುಮೇಶರಮ್ಮ ॥
ಸಾರಿ ಹೇಳಿದ ವೇದವಾಕ್ಯದ ಮೂಲಮಂತ್ರವನರಿತು
ಕೊಂಡು
ಶರಣ ನವಪುರಜಾತನು ಪಾರಮಾರ್ಥವ ತಿಳಿದನಮ್ಮ
॥೪॥

## ೧೪

ಎಷ್ಟು ಮಂದಿಗೆ ಹಾಸಿಗ್ಹಾಸಲಿ ಸಂಸಾರದೊಳಗೆ ।
ಎಷ್ಟು ಮಂದಿಗೆ ಸೆರಗು ಬೀಸಲಿ ॥ಪ॥
ಎಷ್ಟು ಮಂದಿಗೆ ಹಡದಿ ಹಾಸಲು ಕಷ್ಟಕ್ಕೇ ಗುರಿಯಾದನೆಲ್ಲ ।
ಇಷ್ಟು ದೈವದ ತೋರಿ ಸಂತುಷ್ಟಗೊಳಿಸುವವವರ ಕಾಣೇ ॥ಅ.ಪ॥

ತಿರುಗಿತಿರುಗಿ ಸೋತು ಕುಂತಾಗ ಎತ್ತಲಿಂದಲೊಬ್ಬ
ಶರಣ ಸದ್ಗುರು ಯನ್ನ ಬಳಿ ಬಂದ ॥
ಆರು ತಾನೆಂಬುವದು ತಿಳಿಸಿ । ಪರಿಪರಿಯಿಂದಲಿ ಬೋಧಿಸಿ
ಮೂರು ಲೋಕವ ಹೊತ್ತು ಮೆರೆವಾ ನಾದ ಬ್ರಹ್ಮನು
ತಾನೇ ಎಂದ ॥೧॥

ಶಂಕುನಾದವು ಮೊಳಗುತಿರುವದು । ಓಂಕಾರದಲ್ಲಿ ।
ಸಂಖ್ಯಾಯೋಗದ ಜಪವಗೈಯ್ಯುವುದು ।
ಮಂಕುತನದಲ್ಲಿರುವ ಮನವ । ಅಂಕಿತದಲ್ಲಿರಿಸಿಕೊಂಡು
ಭೋಂಕನಲ್ಲಿ ಲಕ್ಷ್ಯವಿರಿಸಲು । ಮೋಕ್ಷ ಪಥವ ಕಂಡಕೊಂಡೆ ॥೨॥

ಚಂದ್ರ ಸೂರ್ಯ ಬ್ರಹ್ಮನಾಡಿಗಳು । ನಾಸಿಕದಲ್ಲಿ ।
ಹಿಂದೆ ಮುಂದೆ ಸುಳಿಯುತಿರುವುದು ।
ಎಂದೆಂದಿಗವರ ನಡೆನುಡಿಯ ಮಂದಗ ಮನೆಯಾಗಿ ಕೇಳಲು
ತಂದೆ ತಾಯಿಗಳಾಗಿ ಕಾಯುತ । ಮುಂದೆ ಒದಗುವ ಪರಿಯ ಪೇಳ್ವರು ॥೩॥

ಪಾತಾಳ ಸ್ವರ್ಗ ಮರ್ತ್ಯದ್ವಾದಿಗಳು । ತ್ರಿಕೂಟದಲ್ಲಿ ।
ಸುತ್ತಿ ಮಲಕು ಹಾಕಿಕೊಂಡಿಹವು ॥
ಚಿತ್ತದೃಷ್ಟಿಯಿಟ್ಟು ನೋಡಲು । ಜ್ಯೋತಿ ಪಕ್ಕನೆ ಮಿಂಚಿ ಬೆಳಗಲು
ಕತ್ತಲ್ಹರಿದು ಬೆಳಕು ಚೆಲ್ಲಿ । ಎತ್ತನೋಡಲು ಮಾರ್ಗ ಸುಲಭ ॥೪॥

ಮೇಲುಶಿಖರಕ್ಕೇರಿ ಹೋಗಲು । ಜಗದಾದಿಶಕ್ತಿಯು
ಬಲುಭೀಕರದಿಂದ ಇರ್ಪಳು ॥
ನಿಲ್ಲದವಳ ಸೇವೆಗೈಯಲು ನಲಿದು ಶಾಂತಸ್ವರೂಪಳಾಗಿ।
ಹಾಲುಕುಡಿಸಿ ಮನವಚಣಿಸಿ ಧನ್ಯನಾಗೆಂದಳು ಹರಿಸಿ ॥೫॥

ನಾದಿಗಧಿಕವಾಗಿ ಶೋಭಿಸುವ ರಾಜೂರುವಾಸ ।
ಪೊಡವಿಗೊಡೆಯ ಶ್ರೀಗುರು ಹನುಮೇಶ
ಬಿಡದೆ ಪಾದಪದ್ಮ ಸಮೀಪ ತರುಳನವಪುರಜಾತನಮ್ಮ
ಹಾಡಿಹಾಡುತ ಸಾಲಿದನು ಮೋಕ್ಷಪಡಿಲಿಯ ಪರಿಯನ್ನು ॥೬॥

೧೫

ರಾಶಿ ಮಾಡ್ಯಾರೋ ನೋಡು । ಶಿವಶರಣರು
ರಾಶಿ ಮಾಡ್ಯಾರ ನೋಡು ॥ಪ॥
ರಾಶಿ ಮಾಡ್ಯಾರ ನೋಡು । ಸೋಸಿ ವಿಚಾರ ಮಾಡು
ದೇಶಕ್ಕೆ ಪ್ರಭುವಾದ ಈಶ ಹನುಮೇಶನು ॥ಅ.ಪ॥

ಅರವತ್ತು ಮೂರುಮಂದಿ । ಶಿವಶರಣರು ।
ಹೊರಟರು ಭಕ್ತಿಲಿಂದೆ ॥
ಪೂರ್ವದ ಶರಣರು ಅವತರಿಸಿ ಬಂದಂತೆ ।
ಕುರುಹುಗಳ ಶಕ್ತಿಸಾಧಿಸಿ ನೋಡಲು ॥೧॥

ಗುರುಸ್ಥಾನಕ್ಕೆ ಬಂದರು । ಶಿವಶರಣರು
ಧರಿಸ್ಯಾರ ಕಾವಿಯನು ।
ಅರಿವಿನಲ್ಲಿ ಗುರುವು ಮೈದೋರಿದಾಗ ಲೇ ।
ಗುರು ಪೂಜೆಯೊಳಗವರು ತಲ್ಲೀನರಾಗಿ ।।೨।।

ಶಿವಯೋಗಿ ಚಂದಾ ಲಿಂಗ ಸ್ವಾಮಿಯ ।
ಸೇವೆಗೆ ಶರಣರ ಸಂಗ ।।
ಭಾವಭಕ್ತಿಯಿಂದ ಭಜನೆಯ ಮಾಡುತ ।
ದೇವರಂ ಪೂಜಿಸಿ ಆರಾಧನೆಯಗೈದು ।।೩।।

ಮುಕ್ಕುಂದಿ ಮರಹರಿಗಡ್ಡೆ ಖಾದರಲಿಂಗ
ಮಕ್ಕಾದಂತೆ ಮೆರೆವದು ।
ಹೊಕ್ಕು ದರ್ಗಾದೊಳು ಅಲ್ಲಾನಂ ಸ್ಮರಿಸುತ
ಲೋಕಕ್ಕೆ ಅಲ್ಲಿರುವ ಮಹಿಮೆಯ ಸಾರಲು ।।೪।।

ಗಲಗಿನ ಮಠಕ್ಕೋಗಿ । ಚನ್ನಲುಸವ ।
ನೊಲವಂತೆ ಆರಾಧಿಸಿ ।
ಅಲ್ಲಿರುವ ಆಸೆದಳ್ಳದಿವ್ಯಗ್ರಂಥವನೋದಿ ।
ಕಲಿಯುಗದ ಪುಣ್ಯಗೈಯ್ಯುವದಕ್ಕಾಗಿ ।।೫।।

ಕೊಡೇಕಲ್ಲು ಬಸವಣ್ಣನ ಮನದೋಳ್ ।
ಧೃಡವಾಗಿ ಧ್ಯಾನಿಸಲು ।
ಅಡಗಿರುವ ರಹಸ್ಯದನುಭಾವಗಳನ್ನೆಲ್ಲ
ಅಡಗಿ ಮಾಡುಣಿಸಿದ ಅಲ್ಲಮನೇ ತಾಲುಲ್ಲ ।।೬।।

ನೀರಿನಲ್ಲಿ ಮಧ್ಯದಲ್ಲಿ । ಪೆಬಾರಗುಂಡು ।
ಇರುವದು ಜಲದುರ್ಗದಿ ।।
ದುರ್ಗೆಯ ಭಜಿಸಲಿ ಗುಂಡು ತಾಯ್ತೆರೆಯಲು ।
ಶರಣರ ಮಹಿಮೆಯ ಜಗದೋಳು ಸಾರುತ ।।೭।।

ತಂದೆ ಅಲ್ಲಮ ಪ್ರಭುವಿನ । ಶೂನ್ಯದ ಜ್ಞಾನ ।
ಸಂದೇಶಗಳ ಸಾರುತ ।
ಮುಂದಾಗಿ ಪೋಗುವ ಸದ್ಗುರು ಹನುಮೇಶನೇ
ಕಂದನವಪುರಜಾತ ಹಾಡಿದನೀ ಕವಿತ ।।೮।।

೧೬

ತನು ಮನ ಒಂದಾಗಿ । ಶ್ರೀ ಗುರುವೆ ನಿನ್ನ ।
ಧ್ಯಾನದೊಳಿರಲಾಗಿ ॥ಪ॥
ಮನವು ನಿನಗಾಗಿ । ನೆನಪು ಘನವಾಗಿ ।
ನಾನೀನು ಒಂದಾಗಿ । ನಿನ್ನಲ್ಲೇ ಇರಲಾಗಿ ॥ಅ.ಪ॥

ಕೇಳಿದೆ ನಿನ್ನ ಶ್ರವಣ । ಹಾಲು ಜೇನಿನಂಥ ।
ಕೇಳಿದೆ ನಿನ್ನ ವಚನ ॥
ಎಲೆಲ್ಲಿ ನಿನ್ನ ಕವನ । ಉರಿತಿದೆ ಅನುದಿನ ।
ಬಲ್ಲ ಗುರುವೆ ನಿನ್ನ । ಬಲ್ಲಂಥವನೇ ಶರೂ ॥೧॥

ಸೂರ್ಯನ ರಥಕ್ಕೆ ಒಂದೇ । ಗಾಲಿಯು ಇದ್ದು ।
ಧರಿಸಿರುವ ಕುದುರೆಗಳೇಳು ॥
ತುರನಗಳ ಬಣ್ಣ । ಏಳು ತೆರನಾಗಿಹವು ।
ಈರೇಳು ಲೋಕವೆಲ್ಲಾ ಕ್ಷಣದೊಳು ವೆಳಕುಚೆಲ್ಲ ॥೨॥

ಕಾಡಡವಿಯೊಳಗೆ । ಬೇರನಿಲ್ಲದ ।
ಗಿಡವೊಂದು ಬೆಳದ್ಮೆಲೆ ॥
ಜಡವೃಕ್ಷದಡಿಯಲ್ಲಿ ಸುಮ್ಮನೆ ಒರಗಲು ।
ಗಡನೆ ಮುಕ್ತಿ ಮಂದಿರವ ತೆರಕೊಂಡಿತು ॥೩॥

ಮಿಕ್ಕಿದ ಹಕ್ಕಿಯೊಂದು । ಮೂಗೂರಿನಲ್ಲಿ ।
ಪಕ್ಕನಿಲ್ಲದೇ ಹಾರುವದು ॥
ಜೋಕಾಲಿ ಜೂಕುವುದನ್ನು ಜ್ಯಾಕಿಲಿ ನೋಡಲಿಲ್ಲ ॥
ಏಕದಂತ ಗಣಪನು ಪ್ರತ್ಯಕ್ಷನಾಗುವನಲ್ಲಿ ॥೪॥

ಎರಡು ಹುಬ್ಬಿನ ನಡುವೆ । ಅಗ್ನಿಚಕ್ರವು ।
ಗರ್ರನೆ ತಿರುಗುತಲಾದ ॥
ಗುರಿಯಿಟ್ಟು ದೃಷ್ಟಿಯೆಂಬ ಬಾಣವನೊಡೆಯಲಿಲ್ಲ ।
ಮೂರು ಲೋಕದ ಹಾದಿ ಗೋಚರಿಸುವುದಲ್ಲಿ ॥೫॥

ಮೇಬ ಮಂಟಪನೇರಲು । ಬಾರದಂತಹ ।
ಒಳಚರಂಡಿಯೊಂದು ಐತೆ ।

ಕಾಳಿಭೈರವಿಯ ಮೆಚ್ಚುಗೆ ಪಡೆಯಲಿಲ್ಲ,
ಒಲಿದು ತೋಳಲ್ಲಿ ಬಳಸಿ ಎತ್ತಿಕೊಂಡೊಯ್ಯುವಳು
ಒಲಿದು ತೋಳಲ್ಲಿ ಬಳಸಿ ಎತ್ತಿಕೊಂಡೊಯ್ಯುವಳು

ದೇಶಕ್ಯಾಧಿತವಾದ । ರಾಜೂರು ವಾಸ ।
ಈಶ ಸದ್ಗುರು ಹನುಮೇಶ ॥
ಏಸೇಸು ಕಾಲ ನಿನ್ನ ಧ್ಯಾನದಲ್ಲಿರುವೆನಾ ।
ಕೂಸನವ ಪುರಜಾತ ನಿನ್ನ ದಾಸಾನುದಾಸ ॥೩॥

೧೭

ಕೂಕೂಕೂ ಎಂದು ಕೂಗುತ್ತೈತಿ ಬೆಳವಾ ।
ಬೆಳವನ ಅರಿಯದವರು ಆಗ್ಯಾರ ಮುಳವಾ ॥ಪ॥

ಆಕಾಶದಿ ಬಂದು ಭುವಿಗೆ ಸೇರುವುದು
ಅಖಿಲ ಬ್ರಹ್ಮಾಂಡವ ಸುತ್ತುತಲಿಹುದು
ರೆಕ್ಕೆಯ ಬೀಸಿ ಸಿಗದೆ ಹಾರುವುದು
ಸಿಕ್ಕರೆ ಸದಾನಂದ ಸುಖ ನೀಡುವುದು ॥೧॥

ಕಾಡಡವಿಯೆಂಬ ಕಾನನದೊಳಗೊಂದು
ಗೂಡನು ಕಟ್ಟಿಕೊಂಡು ನೆಲೆಸಿರುವುದು
ಎಡೆಬಿಡದೆ ನಿತ್ಯ ಕೂಗುತಲಿಹುದು
ಹಿಡಿದವರಿಗೆ ಅದು ಎಡೆಯಾಗುವುದು ॥೨॥

ಎರಡು ರೂಪವ ತಾಳಿ ಸೇವೆಗೈಯ್ಯುವದು
ಕೋರಲು ನಿತ್ಯದ ಶಾಸ್ತ್ರ ಪೇಳುವುದು
ನೂರಾ ಒಂದು ಸಲ ಜಪ ಮಾಡುವುದು
ಮರೆಯದೆ ಮಗನ ಹಡೆದು ಪೋಷಿಪುದು ॥೩॥

ಕೂಡಲ ಸಂಗಮದಿ ಸ್ನಾನಗೈಯ್ಯುವದು
ದೃಢವಾಗಿ ನೋಡಲಿಲ್ಲ ಬೆಳಕು ಚೆಲ್ಲುವುದು
ಗಡಣದಿ ಮೂರುಲೋಕ ಬಾರಿ ತೋರುವದು
ಕಡಲಳಿಯನ ಪುತ್ರನ ಪುರಕ್ಕೆ ಹಾರುವುದು ॥೪॥

ಸಾಸಿರ ಭುಜಗಳ ಚಾಚಿ ನಿಂತಿಹುದು
ಈಶ್ವರಿ ರೂಪದಿಂ ಭೀಕರಿಸುವದು
ಕೂಸಾಗಿ ಪೋಗಲಿಲ್ಲ ಹರುಷಗೊಳ್ಳುವದು
ಆಶೀರ್ವಾದ ಮಾಡಿ ಮೋಕ್ಷ ನೀಡುವದು ||೫||

ಭುವಿಯೋಳು ರಾಜೂರು ಗುರು ಹನುಮೇಶನ
ಪಾವನ ಚರಣವ ಸೇವಿಪನನುದಿನ
ನವ ಪುರಜಾತನು ಹಿಡಿದನು ಬೆಳವನ
ಕವಿ ಮಾಡಿ ಹಾಡುತ ಮರೆತನು ಮೈಮನ ||೬||

೧೮

ಕೋಲು ಕೋಲೆನ್ನ ಕೋಲೆ
ಕೋಲು ಹೂವಿನ ಕೋಲೆ ||ಪ||

ಕೈಲಾಸದಿಂದ ಬಂದು ಭೂಮೆಲ್ಲ ತುಂಬಿಕೊಂಡು
ಕೋಲು ಕೋಲೆಂಬುತಾದೆ ||ಅ.ಪ||

ಏಳು ಸುತ್ತಿನ ಕ್ಯಾಟಿ
ಅಲ್ಲಿ ಮಲ್ಲಿಗೆ ಹೂವಿನ ಪ್ಯಾಟಿ
ವ್ಯಾಳ್ಯಾ ವ್ಯಾಳ್ಯಾದಲ್ಲಿ ತಾಳ ಮಧ್ದಲಿ ಶಬ್ದ
ಮೊಳಗಿಸುವಂಥಹ ಕೋಲೆ ||೧||

ಅಂಬುಜ ಮುಖಿಯಳ
ಡಿಂಬದೋಳಿರುವ ಕೋಲೆ
ಅಂಬರದಿಂದ ನೇರಸ್ತಂಭವನು ಊರಿ
ಸಂಭ್ರಮದೇರಿಳಿಯೋ ಕೋಲೆ ||೨||

ಹಣೆಯ ಮಧ್ಯದಲ್ಲಿರುವ
ಮಾಣಿಕ್ಯದಂತೆ ಹೊಳೆವ
ಭಾನುಕೋಟಿ ತೇಜ ಜ್ಯೋತಿಯಿಂ ಬೆಳಗುವ
ರನ್ನದಂತಹ ಕೋಲೆ ||೩||

ಹತ್ತು ಹನ್ನೆರಡು ದಾಟಿ
ಹತ್ತಿ ಮೇಲ್ಹೋದ ಕೋಲೆ
ಮತ್ತೆ ಬಾರದಂಥ ಸತ್ಯಲೋಕವ ಸೇರಿ
ಮುಕ್ತಿ ಹೊಂದಿದ ಕೋಲೆ ||೪||

ಶಿವಶರಣ ಹನುಮೇಶ
ತವ ಚರಣ ಸೇವಿಪದಾಸ
ನವಪುರ ಜಾತನ ಭವರೋಗ ನ್ನಾಶನ
ಗೈವ ಸದ್ಗುರುವಿನ ಕೋಲೆ ||೫||

೧೯

ಕೇಳವ್ವ ನನಮಗ | ಬಲ್ಲದು ಒದ್ದಾನೆ |
ಲೀಲೆಯ ಮಲ್ಲಿಗೆ ಹೂವ ಮುಡಿದಾನೆ |
ಬಲ್ಲಿದ ಗುರುವಿನ ಪಾದಕ್ಕೆ ||ಪ||

ಸಂಚಿತ ಕರ್ಮವು ಬೆನ್ನತ್ತಿ ತಿರುಗುವುದು |
ಮುಂಚಿತವಾಗಿ ಕಳೆದುಕೊಳ್ಳುವ ಯತ್ನವು |
ಹಂಚಿಕೆಯಿಂದಲಿ ಮಾಡಲಿಬೇಕು ||೧||

ಆಸತ್ತು ಬ್ಯಾಸತ್ತು ದೇಶವ ತಿರುಗಿದೆ |
ಕೋಶವ ನೋಡಲು ಆಶಿಸಿ ನಾ ಬಂದೆ |
ಕಾಶಿಲಿಂಗನ ದರುಶನ ಪಡೆದೆ ||೨||

ಆಕಾಶದೊಳಗಿಂದ ನಿರಾಕಾರವು ಬಂದು |
ಸಾಕಾರ ರೂಪವಾಗಿ ಆಕಾರ ಉಕಾರ
ಮಕಾರ ಕೂಡಿ ಓಂಕಾರವಾಯಿತು ||೩||

ಓಂಕಾರದೊಳಗೊಂದು ಖಿಣಿ ಖಿಣಿರೆನ್ನುವ |
ಝೇಂಕಾರ ನಾದವು ಮೊಳಗುತಲಿರುವುದು |
ಶಂಕರನೇ ತಾನೇ ಹೌದೆಂದು ||೪||

ಆ ಕಡೆಕೇರೆವನೊಬ್ಬ | ಈ ಕಡೆ ಕೇರೆಲಿ ಬಂದು |
ಬೇಕಂತಲೇ ತಿರುಗುತ ಸೋಕು ಮಾಡುವನು |
ಏಕದಂತನ ರೂಪ ತೋರುವನು ||೫||

ಮೂವರನ್ನೊಂದಲಿ ಕೂಡ್ಸಿ ಸವಿಯಾದೂಟಗಳುಣಿಸಿ ।
ಸಾವಕಾಶದಿಂದವರ ಸೇವೆಯಗೈಯ್ಯಲಲ್ಲಿ ।
ಭುವನ ತ್ರಯಗಳು ಗೋಚರಿಸಿ ॥೬॥

ದಿನಕೆಪ್ಪತ್ತೇಳು ಸಾವಿರ ಆರುನೂರು ಸಲಜಪವ ।
ಅನುದಿನದಲ್ಲಿ ಮಾಳ್ಪ ಘನಮಹಿಮನ ಸ್ನೇಹ
ವಿನಯದಿಂ ಮಾಡಿದವಗೆ ಮುಕುತಿ ॥೭॥

ಪೊಡವಿಯೊಳು ರಾಜೂರು ಒಡೆಯಹನುಮೇಶನ ।
ದೃಢವಾಗಿ ನಂಬಿದ ನವಪುರ ಜಾತನು ।
ಕಡೆಗಾಣಿಸಿ ನಡೆದನು ಭವವನ್ನು ॥೮॥

## ೨೦

ಶಿವಶಿವಯನಗೊಬ್ಬ । ದೇವಾ ಮಾನವ ಸಿಕ್ಯಾನ ।
ಸಾವನಿಲ್ಲದ ದೇವರ ಠಾವು ತಿಳಿಸ್ಯಾನ ॥೧॥

ನಾಟ್ಯ ಮಂದಿರದಲ್ಲಿ । ನಟರಾಜ ಧಿತ್ತಿತ್ತಂತಾನ ।
ನಾಟ್ಯವಾಡುತ ಘಂಟೆನಾದವ ಮಾಡ್ಯಾನ ॥೨॥

ಅತ್ತೆವ್ವ ಮನಿಯಾಗ । ಬುತ್ತಿ ಗಂಟು ಇಟ್ಟ್ಯಾನ ।
ಗೊತ್ತು ತೋರಿಸಿ ದಿನ । ನಿತ್ಯ ಉಣಬೇಕಂತಾನ ॥೩॥

ಎಡಗಡೆಗೇರುತಾನ । ಮತ್ತೆ ಬಲಗಡೆಗಿಳಿತಾನ ।
ಇಡಾಪಿಂಗಳ ಮಧ್ಯ । ನಾಡಿಯೊಳಾಡ್ಯಾನ ॥೪॥

ಮುಂದೆ ಮೂರರ ನಡುವೆ । ಸಂದು ತಿಳಿಸಲು ಬಂದಾನ ।
ಚೆಂದ ಚೆಂದದ ಬೆಳಕು ಚೆಲ್ಲುತ ಹೊಂಟಾನ ॥೫॥

ಮೇಲಾಗ್ರ ಶಿಖರದಲ್ಲಿ । ಕಾಳಿಕಾದೇವಿ ಕುಂತಾಳ
ಬಾಲನಾಗಿ ಪೋಗಲಲ್ಲಿ । ಒಲಿದು ಬಂದಾಳ ॥೬॥

ಜಗದೊಳು ರಾಜೂರು ಶ್ರೀ ಗುರು ಹನುಮೇಶನವ್ವ ।
ಮಗನಾದಂಥ ನವಪುರಜಾತನು । ಹೆಜ್ಜೇಳ್ಯಾನವ್ವ ॥೭॥

೨೧

ಮಂಗಳಾರತಿ ಬೆಳಗುವೆ ।
ಅಂಗ ಸಂಗಮನಾಥಗೆ ॥ಪ॥
ಕಂಗಳ ಕಾಂತಿಗೊಡೆಯ ।
ಜಂಗಮ ಗುರು ಲಿಂಗಗೆ ॥ಅ.ಪ॥

ಧರಣಿಯೊಳು ಅತಿಶ್ರೇಷ್ಠವೆನಿಸಿದ ।
ನಾಡಿನ ಮುಕ್ಕುಂದ ಪುರದ ।
ಗಡಿಯ ನೀರ ಮಧ್ಯ ನೆಲೆಸಿದ
ಗಡ್ಡೆ ಖಾದರ ಲಿಂಗಗೆ ॥೧॥

ಸುಂದರಂಗದ ಅರಮನೆಯೊಳು ।
ಅಂದದ ಗದ್ದುಗೆಯ್ಯನೇರಿ ।
ಮಧ್ಯ ಭಕುತರ ನಿಂದು ರಕ್ಷಿಪ ।
ಚಂದಲಿಂಗ ಸ್ವಾಮಿಗೆ ॥೨॥

ಭೋಗ ಭಾಗ್ಯವನೊಲ್ಲದಿರುವ ।
ಯೋಗಿವರ್ಯ ಮಹಾತ್ಮಗೆ ।
ಆಗಮಾದಿಗಳಿಗೆ ಮೀರಿದ ।
ಶ್ರೀ ಗುರು ಹನುಮೇಶಗೆ ॥೩॥

ಸಪ್ತನದಿಯ ಉಗಮಸ್ಥಾನದ ।
ಲ್ನಿಪ್ತ ಪರಬ್ರಹ್ಮಗೆ ।
ಗುಪ್ತ ಗೌಪ್ಯವ ಜಗಕೆ ತೋರಿದ ।
ಅಪ್ಪ ತಿಪ್ಪಣ್ಣಯ್ಯಗೆ ॥೪॥

# ಕಲ್ಮಲಾ ತಾಯಣ್ಣನ ತತ್ವಪದಗಳು

## ೧

ನಮೋನಮಃ ಓಂ ಶ್ರೀ ಗುರು ಹನುಮೇಶ ।
ಪಾರು ಮಾಡೋ ಪಾಶ । ಬೇಡುವೆ ಶಿಷ್ಯ ||ಪ||

ಅಂಗದ ರಾಜನೆ । ಅಂಗರಹಿತ ದೇವನೆ ।
ಮುರಳೀ ನಿನಾದನೆ । ಸರ್ವಮೂಲ ಶಿವನೆ ||
ಕಾರುಣ್ಯ ನಿಧಿಯ ನೀಡಿ । ಕಾಯೋ ದೇವನೆ ||೧||

ಮಾಯದ ಮೂಲನೆ । ಮಾಯ ರಹಿತ ಶ್ರೇಷ್ಠನೆ ।
ಭಾನು ಪ್ರಕಾಶನೆ । ನಿಸ್ಸಂಗ ದೇವನೆ ।
ಪಾವನ ಜಲವ ನೀಡಿ । ತೃಷೆಯ ಕಳೆಯೊದೇವನೆ ||೨||

ರಾಜೂರು ವಾಸನೆ । ಅಖಂಡ ಮಹಿಮನೆ ।
ಸರ್ವಜೀವಿಜಾತನೆ । ಸರ್ವಲಯ ಕರ್ತನೆ ।
ಕಲ್ಮಾಲಿ ತಾಯಣ್ಣನ । ಪೊರೆಯೊ ದೇವನೆ ||೩||

## ೨

ಜಗಕ್ಕೆ ಬಂದಾನ ಅವತರಿಸಿ ।
ನಾವೆಲ್ಲಾ ಸ್ಮರಿಸೋಣ ಮನ ಸೋಲಿ ।
ಬಹು ಮಹಿಮಾನಣ್ಣ ಗುರು ತಿಪ್ಪಣ್ಣ ।
ಜಗ ಕುಣಿಸಿದನಣ್ಣ ಗುರು ತಿಪ್ಪಣ್ಣ ||ಪ||

ಶ್ರವಣ ಮನಮುಚ್ಚಿ ಕೇಳು ।
ಮುತ್ತು ಸುರಿದಂತೆ ಬಾನಿನೊಳು ।
ಪಾದ ಪೂಜೆಯೊಳಾಡು ।
ಸಗ್ಗದ ಸವಿಂದು ಸೂಡು ।
ಶಾಂತಿಯ ಸಾಗರವು । ಬನದತನ್ಮಯವು ।
ಗುರು ತಿಪ್ಪಣ್ಣ । ಜಗ ಕುಣಿಸಿದನಣ್ಣ ಗುರು ತಿಪ್ಪಣ್ಣ
॥೧॥

ವಿದ್ಯೆ ಭಾಂಡಾರ ಸಿರಿಯು ।
ರವಿಕಾಂತಿ ಹರಡಿದ ಪರಿಯು ॥
ಜ್ಞಾನ ಬೆಳೆಯ ನಿಲವು ।
ಚಂದ್ರನ ತಂಪಿನ ಒರವು ॥
ಪುಷ್ಪದ ಮಕರಂಧ । ಜೇನು ಸವಿದಾನಂದ ।
ಗುರು ತಿಪ್ಪಣ್ಣ ॥ ಜಗ ॥೨॥

ಜಹಿರಾಬಾದು ವಾಸ ।
ಮಠವೊಂದು ಚಿಕ್ಕದು ಸೊಗಸ ।
ಶಿಷ್ಯ ವೃಂದದ ನೆನಪು ।
ಶ್ರೀ ಗುರು ಹನುಮೇಶರ ಶಿಶುವು ।
ಕಲ್ಮಾಲಿ ತಾಯಣ್ಣನ ಅಂತರಂಗದ ಶಿವನು ।
ಗುರು ತಿಪ್ಪಣ್ಣ । ಜಗ ॥ ॥೩॥

೩

ಯಾರಿಗ್ಹೇಳಲಮ್ಮ ತಂಗಿ ।
ಯಾರಿಗ್ಹೇಳದ ಸುದ್ದಿ ತಂಗಿ ॥ಪ॥
ಯಾರಿಗ್ಹೇಳುಲಮ್ಮ ಯಾರಿಗ್ಹೇಳದ ಸುದ್ದಿ ।
ಮನೆಯೊಳಗಿನ ಗಂಡ ಮಾಡಿದ ಹಗರಣ ॥೧॥

ಏಕಾಂತ ಸ್ಥಳವಮ್ಮ ತಂಗಿ ।
ಅಲ್ಲಿಗೆ ಕರೆದೊಯ್ದ ತಂಗಿ ।
ಮೊದಲ ದಿನದಂದು ಮುದ್ದಿಟ್ಟ ಮೋಹವದು
ವಶಳಾಗಿ ತೋಳಲ್ಲಿ ಬಿದ್ದೇನೆ ತಂಗಿ ॥೨॥

ಊರ ಮುಂದಿನ ಗುಡಿಯು ತಂಗಿ ।
ಉಮಾಪತಿಯು ದೇವಾ ತಂಗಿ ॥
ಅಲ್ಲಿಗೆ ಕರೆದೊಯ್ದು ಯನ್ನ ತೋಳಲಿ ಎಳೆದು ।
ಬಿಗಿದು ಅಪ್ಪಿದನೇ ತಂಗಿ ॥೩॥

ಮೋಸದ ಮನೆಯಮ್ಮ ತಂಗಿ ।
ಜಾಗ್ರದಿ ನಡೆಯಮ್ಮ ತಂಗಿ ।
ಕಣ್ಣಲ್ಲಿ ಕಣ್ಣಿಟ್ಟು ಸಿರಿಯು ಮುಂದಿಟ್ಟು ।
ಮರಳು ಮಾಡಿದನೇ ತಂಗಿ ॥೪॥

ಅಟ್ಟದ ಮನೆಯಮ್ಮ ತಂಗಿ ।
ಮೆಚ್ಚಾರೆ ಕೂತಿದ್ದೇನೆ ತಂಗಿ ॥
ಕೇಶರಾಶಿಯ ಜಗ್ಗಿಯನ್ನ ಮೇಲೆ ನುಗ್ಗಿ ।
ತೋಳಲಿ ಎತ್ತಿದನೋ ತಂಗಿ ॥೫॥

ಆನಂದ ಸಮಯವು ತಂಗಿ ।
ಅದೆಷ್ಟು ಸೊಗಸಮ್ಮ ತಂಗಿ ।
ಯನ್ನ ಬತ್ತಲೆ ಮಾಡಿ ಮೋಹದಿಂದ ಕೂಡಿ ।
ಯನ್ನ ಕೂಡಿದನೇ ತಂಗಿ ॥೬॥

ಧರೆಯೋಳು ಮರೆಯುವ ತಂಗಿ ।
ಕಲ್ಮಾಲಿ ಗ್ರಾಮವು ತಂಗಿ ॥
ಶಿಷ್ಯ ತಾಯಣ್ಣನು ಗುರು ಹನುಮೇಶನ ।
ಕೂಡಿದ ಪರಿಯು ತಂಗಿ ॥೭॥

# ಅನುಬಂಧ : I

## ಗುರುಶಿಷ್ಯರ ಭಾವ ಚಿತ್ರಗಳು

ತಿಪ್ಪಣ್ಣ ತಾತಾ

.ಯರಮಾರೆಪ್ಪ

.ಹೊಸೂರ ತಿಪ್ಪಣ್ಣ.

# ಅನುಬಂಧ : II

## ಗುರುಶಿಷ್ಯರ ತತ್ವಪದಗಳ ಅಕಾರಾದಿ


| ೧ ) ತಿಪ್ಪಣ್ಣ ತಾತಾನ ತತ್ವಪದಗಳ ಅಕಾರಾದಿ | ತತ್ವಪದಗಳ ಸಂಖ್ಯೆ |
|---|---|
| ಅಂಬಿಗ । ಅಂಬಿಗ । ಅಂಬಿಗ । | ೦೭ |
| ಅಯ್ಯಾ ಅಯ್ಯಾ ಕೇಳಯ್ಯಾ | ೧೦ |
| ಅಲ್ಲಿ ಇಲ್ಲ ಎಲ್ಲಿ ಇಲ್ಲ ಅಂತೀರಿ | ೦೫ |
| ಎಲ್ಲಿ ಹಾನ ದೇವನು । ಎಲ್ಲಿ ಹಾನ | ೦೧ |
| ಎಷ್ಟು ಹುಡುಕಿದರೆ ತಂಗಿ | ೦೪ |
| ಕೇಳೊ ಕೇಳೊ ಕೇಳೀರಣ್ಣಾ | ೦೯ |
| ದೇವನಲ್ಲಾವೇನು ಸದ್ಗುರು ಮಹಾ | ೦೨ |
| ಮನಸಿನ ಭೇದವನು ಅಳಿಯಮ್ಮ | ೦೬ |
| ಮರಣದ ಬಾಗಿಲು ತಿಳಿಯಮ್ಮ | ೦೭ |
| ಮಾಡು ಮಾಡು ಗುರುಧ್ಯಾನ ಮಾಡು | ೦೩ |
| ಶೋಭಾನವನ್ನಿರೆ । ಶೋಭಾನವೆನ್ನಿರೆ | ೧೧ |

| ೨ ) ಯರೆಮರೆಪ್ಪನ ತತ್ವಪದಗಳ ಅಕಾರಾದಿ | ತತ್ವಪದಗಳ ಸಂಖ್ಯೆ |
|---|---|
| ಆನಂದದಿ ಬಂದನು ಗುರು | ೦೭ |
| ಎಕ್ಕಡ ಉನ್ನಾಡುರಾ ದೇವುಡು | ೧೫ |
| ಏನು ಹೇಳಲಮ್ಮ ಈ ಭವದಿಭಾದಿ | ೧೦ |
| ತಿಳಿದು ನೋಡಲೊ ನಿನ್ನೊಳಗೆ ನೀನು | ೦೧ |
| ನಾನೇ ಒಳ್ಳೆ ಗರತಿ ಮಹಾ ಪತಿವ್ರತಿ | ೧೪ |
| ನಾರಿ ಹೋಗುವ ರಾಯಚೂರಗೆ | ೦೪ |
| ನಿಜ ನುಡಿ ಶ್ರೀಗುರು ತಿಳಿಯದು ಜ್ಞಾನವಿದು | ೦೨ |
| ನಿನ್ನ ನಂಬಿ ನಾನು ಬಂದೇನೊ । ಶ್ರೀ ಗುರುದೇವ | ೦೬ |
| ನೋಡು ಬಂದೇನಯ್ಯ ನಿನ್ನ ಕರುಣಿಸಯ್ಯ ನೀನು ಎನ್ನ | ೧೨ |
| ಪಾಡಿದೊಂದರು ಒಕ್ಕೆ ಪದಮು ಆದಿ | ೧೬ |
| ಬ್ಯಾಡೊ ನಿಮ್ಮಯ ಸಂಗ ತಿಳಿಯೊಲ ಮಂಗ | ೧೧ |
| ಯುದ್ಧದ ನೋಡಿದಿಯಾ ಕುರುಕ್ಷೇತ್ರ | ೧೩ |
| ಲಿಂಗವಿಲ್ಲದ ಪಕ್ಷಿ ನೋಡಮ್ಮ ನಿನ್ನಂಗದಲಿ | ೦೯ |
| ಸುಮ್ಮನಿದ್ದಾರ ನಿಜಸಿಗೋದಿಲ್ಲ | ೦೮ |
| ಹೀನ ಜನರೀಗ ತಿಳಿಯದೀ ಮಾತು | ೦೩ |
| ಹೀನ ಮಾನವನ ಆದೆನೊ ಈ ಜಗದೊಳು | ೦೫ |

| ೩. ಹೊಸೂರು ತಿಪ್ಪಣ್ಣನ ತತ್ವಪದಗಳ ಅಕಾರಾದಿ | ತತ್ವ ಪದಗಳ ಸಂಖ್ಯೆ |
| --- | --- |
| ಇವನೆಂಥ ಒಳ್ಳೆ ಮಾನವಾನ | ೦೭ |
| ಇವಾ ಎಂಥ ಗಂಡ ಸಿಕ್ಕ | ೧೨ |
| ಎಷ್ಟು ಮಂದಿಗೆ ಹಾಸಿಗ್ಯಾಸಲಿ ಸಂಸಾರದೊಳಗ | ೧೪ |
| ಕಲಿಸಿದನೆ ಸಾಲಿಯನೆಗೆ | ೧೧ |
| ಕೂ ಕೂ ಕೂ ಎಂದು | ೧೭ |
| ಕೇಳವ್ವ ನನ ಮಗ ಬಲ್ಲದು | ೧೯ |
| ಕೈಲಾಸಕೆ ಹೋಗಬೇಕಮ್ಮ | ೦೫ |
| ಕೋಲು ಕೋಲೆನ್ನ ಕೋಲೆ | ೧೮ |
| ಗಂಡನು ದೊರಕಿದ | ೦೯ |
| ಗುರು ಹನುಮೇಶ | ೦೨ |
| ಗುರು ವರನುಯನೆಗೆ | ೦೬ |
| ಗೆಳತಿಯೇ ಕೇಳಮ್ಮ | ೧೩ |
| ಜಯ ಹೇ ಜಯ | ೦೩ |
| ತನುಮನ ಒಂದಾಗಿ | ೧೬ |
| ದರುಶನ ಕೊಡು ಬಾರಯ್ಯ | ೦೪ |
| ನಾನೊಂದು ಹೇಳತೀನಿ | ೧೦ |
| ಮಂಗಳಾರತಿ ಬೆಳಗುವೆ | ೨೧ |
| ರಾಶಿ ಮಾಡ್ಯಾರೋ ನೋಡು | ೧೫ |
| ಶಿವನ ಸ್ಮರಣೆ ಮಾಡು ಜವಧಿ | ೦೮ |
| ಶಿವ ಶಿವ ಯನಗೊಬ್ಬ । ದೇವಮಾನವ ಸಿಕ್ಯಾನ | ೨೦ |
| ಹೂವು ಅರ್ಪಿಸುವೆವು | ೦೧ |

| ೪. ಕಲ್ಮಲಾ ತಾಯಣ್ಣನ ತತ್ವಪದಗಳ ಅಕಾರಾದಿ | ತತ್ವ ಪದಗಳ ಸಂಖ್ಯೆ |
| --- | --- |
| ಜಗಕ್ಕೆ ಬಂದಾನ ಅವತರಿಸಿ | ೦೬ |
| ನಮೋ ನಮಃ ಓಂ ಶ್ರೀ ಗುರು | ೦೧ |
| ಯಾರಿಗೇಳಲಮ್ಮ ತಂಗಿ | ೦೩ |

# ಅನುಬಂಧ : III

## ಪಾರಿಭಾಷಿಕ ಪದಗಳ ಅರ್ಥ

| | | |
|---|---|---|
| ಅಗ್ನಿ ಚಕ್ರ | - | ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ |
| ಅಷ್ಟಮದ | - | ಅನ್ನ, ಅರ್ಥ, ಯೌವನ, ಸ್ತ್ರೀ, ವಿದ್ಯೆ, ಕುಲ, ರೂಪ, ಉದ್ಯೋಗ |
| ಆಕಾಶ ತತ್ವ | - | ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ |
| ಈಡಾ | - | ಮೂಗಿನ ಎಡಹೊರಳಗೆ ಸಂಬಂಧಿಸಿರುವ ನಳಿಕೆ ಇಡಾ (ಅ) ಚಂದ್ರನಾಡಿ ಎನ್ನುವರು |
| ಉನ್ಮನಿ | - | ಊರ್ಧ್ವ ಮುಖವಾದ ಮನಸ್ಸು |
| ಏಳು ವ್ಯಸನ | - | ತನು ವ್ಯಸನ, ಮನ ವ್ಯಸನ, ಧನವ್ಯಸನ, ರಾಜ್ಯ ವ್ಯಸನ, ವಿಶ್ವ ವ್ಯಸನ, ಉತ್ಸಾಹ ವ್ಯಸನ, ಸೇವಕ ವ್ಯಸನ ಇವುಗಳಲ್ಲದೆ ಬೇಟೆ, ಜೂಜು, ಹಗಲು ನಿದ್ರೆ, ಸ್ತ್ರೀ ಲಾಲಸೆ, ಮದ್ಯಪಾನ, ನೃತ್ಯ, ಗಾನವಾದನಾಭಿರುಚಿಗಳು |
| ಐದಕ್ಷರ | - | ನಮಃ ಶಿವಾಯ ಎಂಬ ಮಂತ್ರ |
| ಕೋಗಿಲೆ | - | ಆತ್ಮ, ಕ್ರಿಯಾಶಕ್ತಿ |
| ನಾಲ್ಕು ಆಕಾಶ | - | ಆತ್ಮತತ್ವ, ಬ್ರಹ್ಮಾಂಡ, ಮಹಾಜ್ಞಾನ, ಆತ್ಮ |
| ಪಂಚ ತತ್ವಗಳು | - | ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ |
| ಮಲತ್ರಯ | - | ಆಣವ, ಮಾಯಾ, ಕಾರ್ಮಿಕ |
| ರೇಚಕ | - | ಪ್ರಾಣಾಯಾಮದಲ್ಲಿ ಉಸಿರು ಬಿಡುವುದು |
| ಸಾಧನ ಚತುಷ್ಟಯ | - | ಗುರು, ಲಿಂಗ, ಜಂಗಮ, ಪ್ರಸಾದ |
| ಸುಷುಮ್ನ ನಾಡಿ | - | ಈಡಾ, ಪಿಂಗಳೆ ನಾಡಿಗಳ ಮಧ್ಯದ ನಾಡಿ |
| ಸೋಹಂ | - | ಅವನೇ ನಾನು. |

ತತ್ವಪದ ಸಾಹಿತ್ಯವನ್ನು ಅನುಭಾವ ಸಾಹಿತ್ಯ, ಕೈವಲ್ಯ ಸಾಹಿತ್ಯ ಎಂದೆಲ್ಲಾ ಗುರುತಿಸಲಾಗಿದೆ. ಬದುಕಿನ ಹಲವು ಮುಖಗಳ ಆಳದಲ್ಲಿ ಹುದುಗಿರುವ ದೇವರನ್ನು, ಜಗತ್ತನ್ನು ಕುರಿತ ಅಪೂರ್ವ ಸಂವೇದನೆಗಳ ಆಧ್ಯಾತ್ಮದ ಗಾಂಭೀರ್ಯವನ್ನು ಸಾಕ್ಷಾತ್ಕರಿಸಿಕೊಂಡು ಇಲ್ಲಿ ಮೈದಳೆದಿವೆ. ಪ್ರತಿಯೊಂದು ಅನುಭವದ ತಾತ್ಕಾಲಿಕ ತಳಹದಿಯಲ್ಲಿ ಶಾಶ್ವತವಾದ ಮತ್ತು ಸಾರ್ವಕಾಲಿಕವಾದ ಒಂದು ಜೀವತತ್ವ ಅಡಕಗೊಂಡಿದೆ. ಸಾಮಾನ್ಯರಿಗೆ ಮತಿಗೋಚರವಾಗದಿರುವ ಈ ತತ್ವ ನಮ್ಮ ತತ್ವಪದಕಾರರಿಗೆ, ಅವರ ವಿಶಿಷ್ಟ ಜೀವನ ದೃಷ್ಟಿಯು ಮತ್ತು ದೈವೀಪರವಾದ ಭಾವನೆಯು ಕಾರಣದಿಂದ ಅಂಗೈನೆಲ್ಲಿಯಾಗಿದೆ. ಈ ತತ್ವಪದಗಳಲ್ಲಿ ಅಭ್ಯಾಸದಿಂದ ಮತ್ತು ಅನುಶೀಲನದಿಂದ ಬಂದ ಅನುಭವಕ್ಕಿಂತ ತಮ್ಮ ದಿನನಿತ್ಯದ ಬಾಳು ಬದುಕಿನ ಆಳದ ಸಂವೇದನೆಗಳನ್ನು ಹಾಡುಗಳನ್ನು ಹಾಡುಗಳನ್ನಾಗಿ ಕಟ್ಟಿ ಇಲ್ಲಿ ನಿವೇದಿಸಿಕೊಂಡಿದ್ದಾರೆ. ಈ ಜಿಲ್ಲೆಯಲ್ಲಿ ತಾವು ಪದಕಾರರೆಂದು ಗುರುತಿಸಲಾಗಿರುವ ಇಪ್ಪತ್ಮೂರು ಜನರಲ್ಲಿ ಈ ನಾಲ್ವರು ಗಮನಾರ್ಹರಾಗಿದ್ದಾರೆ. ಶಿಷ್ಟಣ್ಣ ತಾತ, ಹೊಸೂರು ತಿಪ್ಪಣ್ಣ, ಕಲ್ಮಲಾ ತಾಯಣ್ಣ ಮತ್ತು ಯರೆ ಮಾರೆಪ್ಪ ಇವರೇ ಈ ತತ್ವಪದಕಾರರು. ಡಾ: ವಿಜಯಶ್ರೀಯವರು ಈ ನಾಲ್ಕು ಜನ ತತ್ವಪದಕಾರರ ಸಂಕ್ಷಿಪ್ತ ಪರಿಚಯವನ್ನು ಮತ್ತು ಅವರ ಪದಗಳ ಅನನ್ಯ ವಿಶಿಷ್ಟತೆಯನ್ನು ಇಲ್ಲಿ ದಾಖಲಿಸಿದ್ದಾರೆ.